ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 2 ಜನವರಿ 10, 1988 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಜೀವ್‌ಗಾಂಧೀ ಸರಕಾರವನ್ನು ಅಧಿಕಾರದಿಂದಿಳಿಸುವ ಹೋರಾಟದಲ್ಲಿ

1987ರಲ್ಲಿ ಆರಂಭವಾದ ಪ್ರಕ್ರಿಯೆ ತ್ವರಿತ ಗೊಳ್ಳಲಿದೆ

ಇ. ಎಂ. ಎಸ್. ನಂಬುದಿರಿಪಾದ್

ನಮ್ಮ ರಾಷ್ಟ್ರೀಯ ರಾಜಕೀಯದಲ್ಲಿ 1987 ರ ಅತ್ಯಂತ ಮಹತ್ವ ಪೂರ್ಣ ಬೆಳವಣಿಗೆ ಯಾವುದು ? ಈ ಪ್ರಶ್ನೆಗೆ ಬೇರೆ ಬೇರೆಯವರು ಬೇರೆ-ಬೇರೆ ಉತ್ತರ ಕೊಡಬಹುದು. ನನಗೆ ಕಾಣುವ ಪ್ರಕಾರ ಒಂದು ತಿಂಗಳ ಅವಧಿಯ ಭಾರತ ಜಾಥಾ, ಆರು ಝರಿಗಳು ಬಂದು ನವದೆಹಲಿಯಲ್ಲಿ ಸಂಗಮ ಗೊಂಡು ನಡೆದ ಡಿಸಂಬರ್ 9 ರ ಬೃಹತ್ ರ್‍ಯಾಲಿ ನಮ್ಮ ದೇಶದ ತಕ್ಷಣದ ಭವಿಷ್ಯದ ಸಾಧ್ಯತೆಗಳಿಂದ ಗರ್ಭಿತವಾದ ಘಟನೆ.

ಅಂದರೆ ಇದರರ್ಥ ಭಾರತೀಯ ರಾಜಕಾರಣದಲ್ಲಿ ನಡೆದ ಇತರ ಹಲವಾರು ಸಕಾರಾತ್ಮಕ ಅಥವಾ ನಕಾರಾತ್ಮಕ ಬೆಳವಣಿಗೆಗಳನ್ನು ಉಪೇಕ್ಷಿಸಬೇಕೆಂದೇನೂ ಅಲ್ಲ. ಅವೆಲ್ಲಾ ಮುಖ್ಯವೇ ಯಾಕೆಂದರೆ ಜನ ಈಗಿನ ಸರಕಾರದ ಬಗ್ಗೆ ಹೆಚ್ಚೆಚ್ಚು ಖಿನ್ನರಾಗುತ್ತಿದ್ದಾರೆ. ಅದನ್ನು ಬದಲಿಸುವ ಬಗ್ಗೆ ಯೋಚಿಸುತ್ತಿದ್ದಾರೆ ಎನ್ನುವುದನ್ನು ಇದು ತೋರಿಸಿಕೊಡುತ್ತದೆ. ಆದರೆ ಇವೆಲ್ಲಾ ಪ್ರತ್ಯೇಕವಾಗಿ ಅಥವಾ ಒಟ್ಟಾಗಿಯೇ ಆಗಲಿ 'ಈಗ ಏನು ಮಾಡಬೇಕು? ರಾಜೀವ್‌ಗಾಂಧಿಸರ್ಕಾರ ಆಳ್ವಿಕೆ ನಡೆಸಲು ಅಸಮರ್ಥ ಎಂದು ಒಪ್ಪೋಣ. ಅದಕ್ಕೆ ಪರ್ಯಾಯವೇನಿದೆ?' ಎಂಬ ಪ್ರಶ್ನೆಗೆ ಉತ್ತರ ನೀಡಿಲ್ಲ.

1977 ರ ಜನತಾ ಪ್ರಯೋಗದ ಪೂರ್ಣ ವಿಫಲತೆಯನ್ನು ಕಂಡ ಮೇಲೆ ಈಗ ಅದರ ಪುನರಾವರ್ತನೆ, ಅದೂ ದೇಶಾದ್ಯಂತ ಅಸ್ಥಿರತೆ ಹಾಗೂ ಅರಾಜಕತೆ ಉಂಟು ಮಾಡುವ ಶಕ್ತಿಗಳು ಸಕ್ರಿಯವಾಗಿರುವಾಗ ಅತ್ಯಂತ ವಿನಾಶಕಾರಿಯಾಗಬಹುದೆಂದು ಕೆಲವರು ವಾದಿಸುತ್ತಾರೆ. ರಾಜೀವಗಾಂಧಿಯವರ ಕಾಂಗ್ರೆಸ್ ಸರ್ಕಾರ ಮುಂದುವರೆಯ ಬಾರದೆಂದು ಆಶಿಸುವಂತೆಯೇ ಒಂದು ದಶಕದ ಹಿಂದಿನ ಜನತಾ ಪ್ರಯೋಗ ಪುನರಾವರ್ತನೆಯಾಗದಂತೆ ತಡೆಯಬೇಕೆಂಬ ಕಾತುರವೂ ಜನರಲ್ಲಿದೆ.

ಈ ವಾದ, ಈ ಕಾತುರ ಒಪ್ಪತಕ್ಕಂತದ್ದೇ. ರಾಜೀವಗಾಂಧಿ ಸರ್ಕಾರದ ಸ್ಥಾನದಲ್ಲಿ ಹಿಂದಿನ ಜನತಾ ಪ್ರಯೋಗದ ಹೊಸ ಆವೃತ್ತಿ ತರುವ ಬದಲು, ಹೊಸ ಆಳ್ವಿಕೆಯೊಂದಕ್ಕಾಗಿ ದೇಶಪ್ರೇಮೀ ಶಕ್ತಿಗಳು ದುಡಿಯಬೇಕು. ನಿಜವಾಗಿ 1979 ರಿಂದಲೇ ಸಿ. ಪಿ. ಐ. (ಎಂ) ಹಾಗೂ ಇತರ ಎಡ ಪಕ್ಷಗಳು ಕಾಂಗ್ರೆಸ್ಸಿಗೆ ಜನತಾ ಕೂಟಕ್ಕಿಂತ ಭಿನ್ನವಾದ, ಅದಕ್ಕಿಂತ ಎಷ್ಟೋ ಉತ್ತಮವಾದ ಪರ್ಯಾಯ ನೀಡಲು ಪ್ರಯತ್ನಿಸುತ್ತಾ ಬಂದಿದೆ. ಈ ಅವಿರತ ದುಡಿಮೆಯ ಫಲವಾಗಿ ಜನತಾ ಮಾದರಿಯ ಪ್ರತಿ ಪಕ್ಷಗಳ ಐಕ್ಯತೆಗಿಂತ ಗುಣಾತ್ಮಕವಾಗಿ ಭಿನ್ನವಾದ ಒಂದು ಹೊಸ ಶಕ್ತಿ ಮೂಡಿ ಬಂದಿದೆ. ಇದನ್ನು ಬಹಿರಂಗವಾಗಿ ಘೋಷಿಸಿರುವುದೇ ಡಿಸಂಬರ್ 9 ರ ರ್‍ಯಾಲಿಯ ಮಹತ್ವ.

ಈ ಹೊಸ ಶಕ್ತಿ ಕನಿಷ್ಟ ಎರಡು ರೀತಿಯಲ್ಲಿ ವಿಶಿಷ್ಟವಾಗಿದೆ.

ಒಂದನೆಯದಾಗಿ, ಜನತಾ ಮಾದರಿಯ ಪರ್ಯಾಯದಂತೆ ಇದು ಎಡ ಮತ್ತು ಬಲ, ಜಾತ್ಯಾತೀತ ಮತ್ತು ಕೋಮುವಾದಿಹೀಗೆ ಪರಸ್ಪರ ವಿರೋಧಿ ಶಕ್ತಿಗಳನ್ನು ಒಟ್ಟಿಗೆ ತಂದಿಲ್ಲ. ಬಲ ಪಂಥಕ್ಕೆ ಬದ್ಧವಾದ ಮತ್ತು ಜಾತಿ-ಕೋಮುವಾದೀ ಶಕ್ತಿಗಳನ್ನು ಈ ಹೊಸ ಕೂಟ ದೂರವಿಟ್ಟಿದೆ. ಎಡ ಮತ್ತು ಜಾತ್ಯಾತೀತ ಶಕ್ತಿಗಳ ಕೂಟ ವಿದು.

ಎರಡನೇಯದಾಗಿ, ಹಿಂದಿನಜನತಾ ಕೂಟ ಹೆಚ್ಚು ಕಮ್ಮಿ ಚುನಾವಣಾ ರಾಜಕೀಯಕ್ಕೇ ಮೀಸಲಾಗಿತ್ತು. ಕಾಂಗ್ರೆಸ್ಸಿಗೆ ಚುನಾವಣಾ ಸೋಲುಣಿಸುವುದು ಮತ್ತು ಅದಕ್ಕೊಂದು ಸರ್ಕಾರೀ ಪರ್ಯಾಯ ಒದಗಿಸುವುದು ಇದೇಅದರ ಮುಖ್ಯ ಉದ್ದೇಶವಾಗಿತ್ತು. ಆದರೆ ಈಗಿನ ಹೊಸ ಕೂಟ ಚುನಾವಣಾ ಮತ್ತುಸಾಮೂಹಿಕ ಕಾರ್ಯಚರಣೆಯ ಕೂಟ. ವಿವಿಧ ರೀತಿಯ ಸಾಮೂಹಿಕ ಕಾರ್ಯಚರಣೆಗಳಿಂದ ಆರಂಭಿಸಿ (ಮುಷ್ಕರಗಳು, ಮತ ಪ್ರದರ್ಶನಗಳು ಇವುಗಳಲ್ಲಿ ಪ್ರಮುಖ ವಿಧ) ಇವುಗಳಲ್ಲಿ ಭಾಗವಹಿಸುವ ಶಕ್ತಿಗಳು ಅವಕಾಶ ಬಂದಾಗ ಚುನಾವಣಾ ಅಖಾಡವನ್ನು ಪ್ರವೇಶಿಸುತ್ತವೆ. ಈ ಚುನಾವಣಾ ಹೋರಾಟದಲ್ಲಿ ಗೆಲುವಾಗಲಿ, ಸೋಲಾಗಲೀ ಮತ್ತೆ ಸಾಮೂಹಿಕ ಕಾರ್ಯಚರಣೆಗೆ ಹಿಂದಿರುಗುತ್ತವೆ. ಯಾಕೆಂದರೆ, ಒಂದು ವೇಳೆ ಹೊಸ ಕಾಂಗ್ರೆಸ್ಸೇತರ ಆಳ್ವಿಕೆಯೊಂದು ಮೂಡಿಬಂದರೂ ದುಡಿಯುವ ಜನಗಳನ್ನು ಹೋರಾಟಗಳಲ್ಲಿ ಒಂದು ಗೂಡಿಸದೆ ಅದನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

(8ನೇ ಪುಟ ನೋಡಿ)

ಕಾಂಗ್ರೆಯೇತರ ಮುಖ್ಯಮಂತ್ರಿಗಳ ಸಭೆಗೆ ಹಾರ್ಧಿಕ ಸ್ವಾಗತ

ಜನವರಿ 11 ರಂದು ವಿರೋಧ ಪಕ್ಷಗಳಿಂದಾಳಲ್ಪಡುತ್ತಿರುವ ಸರಕಾರಗಳ ಮುಖ್ಯ ಮಂತ್ರಿಗಳ ಸಭೆ ಬೆಂಗಳೂರಿನಲ್ಲಿ ಸಮಾವೇಶಗೊಳ್ಳಲಿದೆ. ಹೋದ ತಿಂಗಳು ಪ. ಬಂಗಾಲದ ಮುಖ್ಯ ಮಂತ್ರಿ ಜ್ಯೋತಿ ಬಸು ರವರು ಕರೆದಿದ್ದ ವಿರೋಧ ಪಕ್ಷಗಳ ಮುಖ್ಯ ಮಂತ್ರಿಗಳ ಸಭೆ ಕಲ್ಕತ್ತದಲ್ಲಿ ಸೇರಿತ್ತು. ರಾಜ್ಯ ಸರಕಾರಗಳ ಕುರಿತು, ಅದರಲ್ಲೂ ವಿರೋಧ ಪಕ್ಷಗಳು ಆಳುತ್ತಿರುವ ರಾಜ್ಯ ಸರಕಾರಗಳ ಕುರಿತು ಕೇಂದ್ರ ಸರಕಾರದ ಆರ್ಥಿಕ ನೀತಿ, 'ರಾಷ್ಟ್ರ ವಿರೋಧಿ' ಎಂಬ ನೆವದಿಂದ ವಿರೋಧ ಪಕ್ಷಗಳ ಸರಕಾರಗಳನ್ನು ಉರುಳಿಸುವ ಕುತಂತ್ರ, ಸರ್ಕಾರಿಯಾ ವರದಿಯ ಪ್ರಕಟನೆ ಮೊದಲಾದ ವಿಷಯಗಳನ್ನು ಚರ್ಚಿಸಲಾಗಿತ್ತು. ತಮ್ಮೊಳಗೆ ಇನ್ನೂ ಹೆಚ್ಚಿನ ತಿಳುವಳಿಕೆ ಐಕ್ಯತೆ ಸಾಧಿಸಿ ಕೇಂದ್ರದ ಜನವಿರೋಧಿ‌ನೀತಿಯ ವಿರುದ್ಧ ಜನಾಭಿಪ್ರಾಯ ಮೂಡಿಸಲು, ಚಳುವಳಿ ಹೂಡಲು ಇಂಥ ಸಭೆಗಳನ್ನು ಹೆಚ್ಚೆಚ್ಚಾಗಿ ಸೇರಿಸಬೇಕೆಂಬ ನಿರ್ಣಯ ಕೈಗೊಳ್ಳಲಾಗಿತ್ತು. ಆ ನಿರ್ಣಯದ ಪ್ರತಿಫಲ ಬೆಂಗಳೂರು ಸಭೆ.

ಈ ಸಭೆಗೆ ಪೂರ್ವ ಭಾವಿಯಾಗಿ, ಒಮ್ಮತದ ನಿರೂಪಣೆ ನಿರ್ಣಯಿಸುವ ನಿರ್ಧಾರದಿಂದ ಕಾಂಗ್ರೆಯೇತರ ರಾಜ್ಯ ಸರಕಾರಗಳ ಹಣಕಾಸು ಮಂತ್ರಿಗಳು ಜ. 5 ರಂದು ಬೆಂಗಳೂರಿನಲ್ಲಿ ಸಭೆ ಸೇರಿ ಹಣಕಾಸು ಆಯೋಗದ ಕಾರ್ಯ ವಿಧಾನ, ಅದರ ಶಿಫಾರಸುಗಳು, ಅದರಿಂದಾಗಿ ರಾಜ್ಯ ಸರಕಾರಗಳು ಅನುಭವಿಸಬೇಕಾದ ಕಷ್ಟ ಅದರಿಂದಾಗಿ ರಾಜ್ಯಗಳ ಅಭಿವೃದ್ಧಿ ಯೋಜನೆಗಳ ಮೇಲಾಗುತ್ತಿರುವ ದುಷ್ಪರಿಣಾಮಗಳ ಕುರಿತು ಚರ್ಚಿಸಿ ಅದರ ಕುರಿತು ಒಂದು ಒಮ್ಮತದ ಅಭಿಪ್ರಾಯಕ್ಕೆ ಬಂದಿರುವುದು ಸ್ವಾಗತಾರ್ಹ. ಪ. ಬಂಗಾಲದ ಅರ್ಥ ಮಂತ್ರಿ ಡಾ|| ಅಸಿಂ ದಾಸ ಗುಪ್ತಾ, ಕರ್ನಾಟಕದ ಕಂದಾಯ ಮಂತ್ರಿ

(8ನೇ ಪುಟ ನೋಡಿ)

ಕಾರ್ಮಿಕ ಸಚಿವರಿಗೆ ಬೇಡಿಕೆಗಳ ಮನವಿ

ಕರ್ನಾಟಕ ಪ್ಲಾಂಟೇಷನ್ ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿ ತೀರ್ಮಾನದ ಮೇರೆಗೆ ಕಾಂ. ಸಿ. ನಂಜುಂಡಪ್ಪನವರ ನೇತೃತ್ವದಲ್ಲಿಒಂದು ಶಿಷ್ಟ ಮಂಡಳಿಯು ಕರ್ನಾಟಕಸರ್ಕಾರದ ಕಾರ್ಮಿಕ ಸಚಿವಶ್ರೀ ಎಸ್.ಕೆ.ಕಾಂತಾರವರನ್ನು ಬೆಂಗಳೂರಿನಲ್ಲಿ 6-1-88 ರಂದು ಭೇಟಿ ಮಾಡಿ ಪ್ಲಾಂಟೇಷನ್ ಕಾರ್ಮಿಕರ ಬೇಡಿಕೆಗಳಿಗೆ ಸಂಬಂಧಿಸಿದ ಮನವಿಗಳನ್ನು ಅರ್ಪಿಸಿ ಪ್ಲಾಂಟೇಷನ್ ಕಾರ್ಮಿಕರ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದಿತು. ಈ ಶಿಷ್ಟ ಮಂಡಳಿಯಲ್ಲಿ ಕರ್ನಾಟಕ ತೋಟ ಕಾರ್ಮಿಕರಸಂಘದಸಕಲೇಶಪುರ,ಪ್ರಧಾನ ಕಾರ್ಯದರ್ಶಿ ಕಾಂ.ವಿ.ಸುಕುಮಾರ ಉಪ ಕಾರ್ಯದರ್ಶಿಕಾಂ. ದೂಜ, ಕರ್ನಾಟಕ ಪ್ರೋವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್, ಚಿಕ್ಕಮಗಳೂರು, ಉಪಕಾರ್ಯದರ್ಶಿ ಕಾಂ.ಜಿ.ಎಸ್. ರಾಘವೇಂದ್ರ, ಸಂಘಟಕ ಕಾಂ. ಅಣ್ಣಿ,ಸಿ.ಐ.ಟಿ.ಯು ರಾಜ್ಯ ಮಂಡಳಿ ಸದಸ್ಯ ಕಾಂ.ಪಿ. ಕೋದಂಡರಾಮು ಇದ್ದರು. ಮನವಿಗಳಿಗೆ ರುಜು ಮಾಡಿದ್ದ ಕೂರ್ಗ್ ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್, ವಿರಾಜಪೇಟೆ,ಪ್ರಧಾನ ಕಾರ್ಯದರ್ಶಿ ಡಾ.ಐ.ಆರ್.ಅಸ್ರಣ್ಣ, ಜತೆ ಕಾರ್ಯದರ್ಶಿ ಷರೀಫ್ ಅದೇ ದಿವಸ ನಡೆದ ಪ್ಲಾಂಟೇಷನ್ ಕೈಗಾರಿಕೆಯ ದ್ವಿಪಕ್ಷೀಯ ಸಭೆಯಲ್ಲಿ ಮಾತ್ರ ಭಾಗವಹಿಸಿದರು.

ಕಾಫಿ ಆಕ್ಟ್ ಪ್ರಕಾರ ಉತ್ಪಾದನೆಯಾದ ಕಾಫಿಯನ್ನು ಪ್ಲಾಂಟರುಗಳಿಂದ ಕಾಫಿ ಮಂಡಳಿಯೇ ಕೊಂಡುಕೊಂಡು ಎಲ್ಲಾ ಕಾಫಿ ಪ್ಲಾಂಟರುಗಳಿಗೂ ಒಂದೇ ದರದ ಬೆಲೆಯನ್ನು ಕೊಡುತ್ತದೆ. ಕೇರಳದ ಕಾಫಿ ತೋಟ ಕಾರ್ಮಿಕನಿಗೆ ದಿವಸಕ್ಕೆ ರೂ. 19 ಕ್ಕಿಂತಲೂ ಹೆಚ್ಚು ಸಿಕ್ಕುತ್ತಿದ್ದರೆ, ಕರ್ನಾಟಕದಲ್ಲಿ ಒಪ್ಪಂದದ ಕೂಲಿ ರೂ 12-25, ಕನಿಷ್ಟ ಕೂಲಿ ರೂ. 11.25 ಸಿಕ್ಕುತ್ತಿದೆ. ಕೇರಳದ ಪ್ಲಾಂಟರಿಗೆ ಎಷ್ಟು ಕೂಲಿ ಕೊಡುವ ಸಾಮರ್ಥ್ಯ ವಿದೆಯೋ, ಕರ್ನಾಟಕದ ಪ್ಲಾಂಟರಿಗೂ ಅಷ್ಟೇ ಕೊಡುವ ಸಾಮರ್ಥ್ಯವಿದೆ. (8ನೇ ಪುಟ ನೋಡಿ)

ಎಸ್. ಎಫ್. ಐ. ಸಮಾವೇಶಗಳು

ಗುಲ್ಬರ್ಗಾ

ಎಸ್.ಎಫ್.ಐ. 17ನೇ ಸ್ಥಾಪನಾ ದಿನಾಚರಣೆ 30.12.87 ರಂದು ಗುಲ್ಬರ್ಗಾದಲ್ಲಿ ಆಚರಿಸಲಾಯಿತು. ಈ ಸಮಾರಂಭದ ಅಧ್ಯಕ್ಷತೆ ಜಿಲ್ಲಾ ಎಸ್.ಎಫ್.ಐ. ಸಂಚಾಲಕರಾದ ನಿಂಗಣ್ಣಾ ಮೊರಟಗಿ ವಹಿಸಿದ್ದರು. ಪ್ರಾರಂಭದಲ್ಲಿ ಪರಿಷತ್ ಸದಸ್ಯರಾದ ಮಾರುತಿ ಮಾನ್ಪಡೆ ಧ್ವಜಾರೋಹಣ ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಸಿ.ಎ. ಪಾಟೀಲ್‌ರವರು ಮಾತನಾಡುತ್ತಾ ಸಮಾಜವಾದ ರಾಷ್ಟ್ರಗಳಿಗೂ ಮತ್ತು ಭಾರತಕ್ಕೂ ಇರುವ ಶಿಕ್ಷಣದ ಅಂತರವನ್ನು ವಿವರಿಸುತ್ತಾ ನವ ಸಮಾಜದ ನಿರ್ಮಾಣಕ್ಕಾಗಿ ಸಂಘಟಿತರಾಗಬೇಕೆಂದು ಕರೆ ಕೊಟ್ಟರು. ನ್ಯಾಯವಾದಿ ಸುಭಾಸ್‌ವಾಣಿಯವರು ಇಂದಿನ ವಿದ್ಯಾರ್ಥಿಗಳು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳು, ನಿರುದ್ಯೋಗ,ಡೊನೇಷನ್, ಕ್ಯಾಪಿಟೇಶನ್ ಫೀ ಹೆಚ್ಚಳ ಮುಂತಾದ ಸಮಸ್ಯೆಗಳಿಗೆ ಸರ್ಕಾರವೇ ಕಾರಣವೆಂದು ತಿಳಿಸಿದರು. ಕಾಂ. ಮಾರುತಿ ಮಾನ್ಪಡೆಯವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕೊನೆಯಲ್ಲಿ ಕಾಂ. ಅಂಬಾರಾವ್ ಮಾನ್ಪಡೆ ವಂದನಾರ್ಪಣೆ ಸಲ್ಲಿಸಿದರು.

ಎಸ್.ಎಫ್.ಐ. ಜಿಲ್ಲಾ ಸಮ್ಮೇಳನ

ಗುಲ್ಬರ್ಗಾದಲ್ಲಿ ಜನವರಿ 16ರಿಂದ 19ರವರೆಗೆ ನಡೆಯಲಿರುವ ಎಸ್.ಎಫ್.ಐ. 5ನೇ ರಾಜ್ಯ ಮಟ್ಟದ ಸಮ್ಮೇಳನದ ಪೂರ್ವಭಾವಿಯಾಗಿ ನಡೆದ ಚಿತ್ರದುರ್ಗ ಎಸ್.ಎಫ್.ಐ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಬಂಡಾಯ ಸಾಹಿತಿ ಎಸ್.ಎಸ್. ಹಿರೇಮಠರವರು "ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು ವಹಿಸಿದ ಪಾತ್ರವನ್ನು ಸ್ಮರಿಸಿ, ವಿದ್ಯಾರ್ಥಿಗಳು ಜಾಗತಿಕ ಶಾಂತಿಗಾಗಿ, ದೇಶದಲ್ಲಿ ಪ್ರಜಾಪ್ರಭುತ್ವದ ಉಳಿವಿಗಾಗಿ, ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ಹೋರಾಡಬೇಕೆಂದು ಕರೆ ನೀಡಿದರು. ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದ ಕಾಂ. ವಿ.ಜೆ.ಕೆ.ನಾಯರ್ ಮಾತನಾಡುತ್ತಾ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯಿಂದ ಇಂದಿನ ವಿದ್ಯಾರ್ಥಿಗಳ ಭವಿಷ್ಯ ಕರಾಳವಾಗುತ್ತಿದೆ ಇದರ ವಿರುದ್ಧ ಹೋರಾಡಬೇಕಾಗಿದೆ ಎಂದು ತಿಳಿಸಿದರು.

ಜಿಲ್ಲಾ ಸಂಚಾಲಕ ಕಾಂ. ಅಣ್ಣಪ್ಪನವರು ಮಂಡಿಸಿದ ವರದಿಯ ಮೇಲೆ ಚರ್ಚಿಸಿ, ನಂತರ ಹೆಚ್ಚಿಸಿರುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕವನ್ನು ಕೂಡಲೇ ಇಳಿಸಬೇಕೆಂದು, ಹರಿಹರದಲ್ಲಿ ರದ್ದಾಗಿರುವ ಪರೀಕ್ಷಾ ಕೇಂದ್ರವನ್ನು ಹರಿಹರದಲ್ಲೇ ಪುನರಾರಂಭಿಸಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಪ್ರಾರಂಭದಲ್ಲಿ ಸ್ವಾಗತ ಸಮಿತಿ ಕಾರ್ಯದರ್ಶಿ ಮಲ್ಲಿಕಾರ್ಜುನಯ್ಯ ಸ್ವಾಗತಿಸಿದರು. 12 ಜನರ ಸದಸ್ಯರನ್ನೊಳಗೊಂಡ ಜಿಲ್ಲಾ ಸಮಿತಿ ರಚಿಸಲಾಯಿತು. ಅಧ್ಯಕ್ಷರಾಗಿ ಎ.ಜಿ.ಗಂಗಾಧರ್ ಉಪಾಧ್ಯಕ್ಷರಾಗಿ ಆರ್. ಅಣ್ಣಪ್ಪ, ಕಾರ್ಯದರ್ಶಿ ಕೃಷ್ಣಾಜಿ ಕಲಾಲ್, ಸಹಕಾರ್ಯದರ್ಶಿ ಡಿ.ಎಂ. ಮರಿಯಪ್ಪ, ಖಜಾಂಚಿಯಾಗಿ ಅಸ್ಫಾಕ್ ಅಹ್ಮದ್ ಆಯ್ಕೆಯಾದರು.

ಹರಿಹರ ತಾಲ್ಲೂಕು ಸಮಿತಿಯಿಂದ ಎಸ್.ಎಫ್.ಐ. 17ನೇ ಸ್ಥಾಪನಾ ದಿನಾಚರಣೆಯ ಅಂಗವಾಗಿ ಪ್ರೌಢಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ಖೋ ಖೋ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಜಾನಪದ ಮತ್ತು ಭಾವಗೀತೆ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಡಿಸೆಂಬರ್ 30ರಂದು ನಡೆದ ಸಮಾರಂಭದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು.

ಎಸ್.ಎಫ್.ಐ. ಸ್ಥಾಪನಾ ದಿನಾಚರಣೆ

ಎಸ್.ಎಫ್.ಐ.ನ 17 ನೇ ವಾರ್ಷಿಕೋತ್ಸವವನ್ನು 30.12.87 ರಂದು ಬಳ್ಳಾರಿ ಎಸ್. ಎಫ್. ಐ. ಕಛೇರಿ ಮುಂದೆ ಜಿಲ್ಲಾಅಧ್ಯಕ್ಷರಾದ ಕಾ.ಷಣ್ಮುಖಪ್ಪನವರಿಂದ ಧ್ವಜಾರೋಹಣಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಕಾಂ.ಪ್ರಸನ್ನಕುಮಾರ್, ಕಾಂ.ಸುರೇಶ ಕುಷ್ಟಗಿ, ಕಾಂ.ಬಿಂದುಮಾಧವ್ ಎಸ್.ಎಫ್.ಐ. ಧ್ಯೇಯ, ಧೋರಣೆ, ಗುರಿಗಳ ಕುರಿತು ಮಾತನಾಡಿದರು. 3.1.88 ರಂದು ಬಳ್ಳಾರಿ ನಗರದಲ್ಲಿ ಜಿಲ್ಲಾ ಸದಸ್ಯರ ಸದ್ಯಜಾತಪ್ಪನವರ ಅಧ್ಯಕ್ಷತೆಯಲ್ಲಿಸರ್ವಸದಸ್ಯರ ಸಭೆನಡೆಸಿ ಹೊಸ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಬಿ. ಈರಣ್ಣ, ಸಹ ಸಂಚಾಲಕರಾಗಿ ಮಾರೆಪ್ಪ ಮತ್ತು ಹನುಮಂತರಾಯ ಹಾಗೂ 12 ಸದಸ್ಯರನ್ನೊಳಗೊಂಡ ಸಮಿತಿ ರಚಿಸಲಾಯಿತು.

ಎಸ್. ಎಸ್. ಎಲ್. ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆಇಂಗ್ಲೀಷ ಮತ್ತು ಅರ್ಥಶಾಸ್ತ್ರದ ಕುರಿತು ಉಚಿತ ಬೋಧನಾ ತರಗತಿಯನ್ನು 8.1,88 ರಿಂದ ಸರ್ಕಾರಿ ಕಿರಿಯ ಮಹಾವಿದ್ಯಾಲಯದಲ್ಲಿ ನಡೆಸುವುದಾಗಿ ಪ್ರಕಟಣೆಯಲ್ಲಿ ಬಳ್ಳಾರಿ ಘಟಕವು ತಿಳಿಸಿದೆ.

ದುಡಿಯುವ ಮಹಿಳೆಯರ ಸಭೆ

ಸಿ. ಐ. ಟಿ. ಯು. ಸಂಯೋಜಿತ ಕಾರ್ಮಿಕ ಸಂಘಗಳ ಸದಸ್ಯರಾಗಿರುವ ದುಡಿಯುವ ಮಹಿಳೆಯರ ದಕ್ಷಿಣ ಕನ್ನಡ ಜಿಲ್ಲಾಸಮಾವೇಶ 22-12-87 ರಂದು ಕುಂದಾಪುರದಲ್ಲಿ ನಡೆಯಿತು. ಸಿ. ಐ. ಟಿ. ಯು. ದ. ಕ. ಜಿಲ್ಲಾಧ್ಯಕ್ಷೆ ಕೆ. ಮೂಸಬ್ಬ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಸಂಚಾಲಕಿ ವಿಮಲ ರಣದಿವೆ. ಅವರು ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ವಿಶಿಷ್ಟ ಸಮಸ್ಯೆಗಳು, ಕಾರ್ಮಿಕ ಸಂಘಟನೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ಇಲ್ಲದಿರುವುದು ಮುಂತಾದ ವಿಷಯಗಳನ್ನು ಸುದೀರ್ಘವಾಗಿ ವಿವರಿಸಿ ಮಹಿಳಾ ಕಾರ್ಮಿಕರೂ ನಾಯಕತ್ವ ರೂಡಿಸಿಕೊಳ್ಳಬೇಕೆಂದು ಸೂಚಿಸಿದರು.

ಸಮನ್ವಯ ಸಮಿತಿ ರಾಜ್ಯ ಸಂಚಾಲಕಿ ಎಂ.ಎಂ. ರಾಜಮ್ಮ, ಕೆ. ಪದ್ಮಾವತಿ ಅವರಲ್ಲದೆ ಎಸ್ ಸೂರ್ಯನಾರಾಯಣ ರಾವ್, ಸಿ. ನಂಜುಂಡಪ್ಪ, ಪಿ. ರಾಮಚಂದ್ರರಾವ್, ಬಿ. ಮಾಧವ ಅವರೂ ಹಾಜರಿದ್ದರು.

ಎಂಟು ಮಹಿಳಾ ಸಂಗಾತಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಕಾ|| ಕೆ. ಪದ್ಮಾವತಿ ಸಂಚಾಲಕಿಯಾಗಿರುವ 15ಸದಸ್ಯರ ಜಿಲ್ಲಾ ಸಮನ್ವಯ ಸಮಿತಿಯನ್ನು ಸಭೆ ಆಯ್ಕೆ ಮಾಡಿತು.

ರಾಜ್ಯ ಸಮಿತಿ ಸಭೆ

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ಸಭೆ ಜನವರಿ 14-15 ರಂದು ಬೆಂಗಳೂರಿನಲ್ಲಿ ಸೇರುತ್ತದೆ. ಎಲ್ಲ ಸದಸ್ಯರೂ ತಪ್ಪದೇ ಹಾಜರಾಗಬೇಕಾಗಿ ವಿನಂತಿ.

ಸೂಚನೆ

ಕರ್ನಾಟಕ ಪ್ರಾಂತರೈತ ಸಂಘದ ಚರಿತ್ರೆಯನ್ನು ಪೂರ್ಣಗೊಳಿಸುವ ಹಂತಕ್ಕೆ ಬಂದಿದ್ದು ಆಯಾ ಜಿಲ್ಲೆಗಳ ಹಿಂದಿನ ಹೋರಾಟಗಳನ್ನು ತಿಳಿಸಬಯಸುವವರು ಕೂಡಲೇ ಕೆಳಕಂಡ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ವಿನಂತಿ.

ಸಿ. ರಾಮಭದ್ರಯ್ಯ
ತಾಲೋಕು ಕಛೇರಿ ರಸ್ತೆ
ದೊಡ್ಡಬಳ್ಳಾಪುರ

ರೈತ ಸಂಘಂದಿದ ಅಡಿಕೆಬೆಳೆಗಾರರ ಸಮಾವೇಶ

ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ವಾಣಿಜ್ಯ ಬೆಳೆಯಾದ ಅಡಿಕೆ ಬೆಲೆ ತೀರಾ ಕುಸಿದಿದ್ದು, ಅಡಿಕೆ ಬೆಳೆಗಾರರ ಸಮಸ್ಯೆ ಬಗೆಹರಿಸುವ ಹಾಗೂ ಅಡಿಕೆಗೆ ಯೋಗ್ಯ ಬೆಲೆ ಸಿಗುವ ತೀವ್ರ ಚಳುವಳಿ ಸಂಘಟಿಸಿ ಸಮಾವೇಶ ನಡೆಸಲು 30.12.87 ರಂದು ಸೇರಿದ ರೈತ ಸಂಘದ ಸಭೆಯಲ್ಲಿ ತೀರ್ಮಾನಿಸಲಾಯಿತು. ಎಲ್ಲಾ ಅಡಿಕೆ ಬೆಳೆಗಾರರನ್ನು ಸಂಪರ್ಕಿಸಲು ಎಲ್ಲಾ ಘಟಕಗಳಿಗೆ ಜಿಲ್ಲಾಸಮಿತಿ ಕರೆನೀಡಿದೆ.

ಮುಚ್ಚಿರುವ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ತೆರೆಯುವಂತೆ ನಿರ್ಣಯವೊಂದನ್ನು ಕೈಗೊಳ್ಳಲಾಗಿದೆ.

ಬೆಂಗಳೂರು ಪಕ್ಷದ ಕಛೇರಿ ಬದಲಾವಣೆ

ಬಿ. ಜಿ. ಕಛೇರಿಯನ್ನು ಸುಲ್ತಾನ್‌ಪೇಟೆಯಿಂದ ಶ್ರೀರಾಮಪುರಕ್ಕೆ ಬದಲಾಯಿಸಲಾಗಿದೆ. ಜನವರಿ 1, 1988 ರಿಂದ ಪಕ್ಷದ ಜಿಲ್ಲಾ ಸಮಿತಿಯ ಎಲ್ಲಾ ಕಾರ್ಯ ಚಟುವಟಿಕೆಗಳು ಇಲ್ಲಿಂದಲ್ಲೇ ನಡೆಯುತ್ತವೆ. ಪಕ್ಷದ ಎಲ್ಲಾ ಸಂಗಾತಿಗಳು ಈ ಬದಲಾವಣೆಯನ್ನು ಗಮನಿಸಬೇಕೆಂದು ಜಿಲ್ಲಾ ಸಮಿತಿ ವಿನಂತಿಸಿದೆ.

ಕಛೇರಿ ವಿಳಾಸ : ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಬೆಂಗಳೂರು ಜಿಲ್ಲಾ ಸಮಿತಿ ಮ. ರಾಮಮೂರ್ತಿ ರಸ್ತೆ
ನಂ 64/2, 2 ನೇ ಅಡ್ಡ ರಸ್ತೆ ಶ್ರೀ ರಾಮಪುರ ಬೆ-29
ಬಸ್‌ಮಾರ್ಗ, ಬಸ್‌ನಿಲ್ದಾಣ, 83c, 52c, ಮಾ, 83, 52, 179.

ಜನವರಿ. 21 ರಂದು ರಾಜ್ಯಾದ್ಯಂತ 'ಸೌಹಾರ್ದ ಮತ್ತು ಬೇಡಿಕೆಗಳ ದಿನಾಚರಣೆ' ಗೆ ಸಿ. ಐ. ಟಿ. ಯು. ಕರೆ

ಸಿ ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಸಭೆಯು ತಾ. 23.12.1987 ರಂದು ಕುಂದಾಪುರದಲ್ಲಿ ಎಸ್. ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನಡೆದು ಅಗಲಿದ ಮುಖಂಡ ಕಾಮ್ರೇಡ್ ಪಿ. ರಾಮಮೂರ್ತಿಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಿತು.

ಬೆಂಗಳೂರಿನ ಐ.ಟಿ.ಸಿ. ಹರ್ಬರ್ಟ್ಸ್ ಇಂಡಿಯಾ, ಮೈಸೂರು ಮತ್ತು ಬೆಂಗಳೂರುಗಳಲ್ಲಿ ಪ್ಯಾನ್ ಕಾರ್ಮಿಕರು ನಡೆಸುತ್ತಿರುವ ಮುಷ್ಕರಗಳನ್ನು ಬೆಂಬಲಿಸಲು, ಇಂಡಿಯಾ ಟಿನ್ ಫ್ಯಾಕ್ಟರಿ, ವಿ.ಎಸ್.ಟಿ. ಇಂಟರ್ ನ್ಯಾಷನಲ್ ಕೋಚ್ ಬಿಲ್ಡರ್ಸ್, ಸಪ್ತಗಿರಿ ವೈನ್ಸ್, ಬ್ರೈಟ್ ಬಾಟಲ್ ಕಂಪನಿ ಭಾರತ ಮಾತ ಗಡಿಯಾರ–ಈ ಸಂಸ್ಥೆಗಳ ಕಾರ್ಮಿಕರು ಬೀಗ ಮುದ್ರೆಗಳ ವಿರುದ್ಧವಾಗಿ ಹಾಗೂ ಬೇಡಿಕೆಗಳಿಗಾಗಿ ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಲು ರಾಯಚೂರು, ಬಿಜಾಪುರ, ಬಾಗಲಕೋಟೆಗಳಲ್ಲಿರುವ ಸಹಕಾರಿ ಸ್ಪಿನ್ನಿಂಗ್ ಮತ್ತು ಜಿನ್ನಿಂಗ್ ಗಿರಣಿಗಳನ್ನು, ಮತ್ತು ಇತರ ಮುಚ್ಚಿ ಹೋಗಿರುವ ಕಾರ್ಖಾನೆಗಳನ್ನು ತೆರೆಯಬೇಕೆಂದು ಒತ್ತಾಯಿಸಲು, ಷಹಬಾದಿನ ಎ ಬಿ.ಎಲ್. ಬೇಡಕೋಕ ಕಾರ್ಖಾನೆಯ ಕಾರ್ಮಿಕರ ಹೋರಾಟವನ್ನು ಬೆಂಬಲಿಸಲು, ಬೀಡಿ, ಪ್ಲಾಂಟೇಷನ್ ಮತ್ತು ಇತರ ಕೈಗಾರಿಕೆಗಳ ಕಾರ್ಮಿಕರಿಗೆ ಹೆಚ್ಚಿನ ಕನಿಷ್ಟ ಕೂಲಿಯನ್ನು ಪ್ರಕಟಿಸಬೇಕೆಂದು ಒತ್ತಾಯಿಸಲು "21.1.1988 ರಂದು ರಾಜ್ಯಾದ್ಯಂತ ಬೇಡಿಕೆ ಮತ್ತು ಸೌಹಾರ್ದದಿನ"ವನ್ನು ಆಚರಿಸಲು ಸಭೆಯು ಕರೆಕೊಟ್ಟಿತು.

ಮಜ್ದೂರ್ ಕಿಸಾನ್ ಜಾಥಾ, ರಾಜ್ಯದಲ್ಲಿ ನಡೆದ ನಾಲ್ಕು ಉಪಜಾಥಾಗಳು ಮತ್ತು ನವದೆಹಲಿಯಲ್ಲಿ ಡಿಸೆಂಬರ್ 9ರಂದು ನಡೆದ ಚಾರಿತ್ರಿಕ ಸಂಸತ್ ಚಲೋ ಚಳುವಳಿಗಳನ್ನು ಅವಲೋಕಿಸಿದ ಸಭೆಯು ಮಾರ್ಚ್ ತಿಂಗಳಲ್ಲಿ ಬರುವ "ಭಾರತ್ ಬಂದ್" ಹೋರಾಟವನ್ನು ಯಶಸ್ವಿಗೊಳಿಸಲು ಕಾರ್ಮಿಕ ಸಂಘಗಳು ಈಗಿನಿಂದಲೇ ಸಿದ್ಧತೆಗಳನ್ನು ಪ್ರಾರಂಭಿಸಬೇಕೆಂದು ರಾಜ್ಯ ಸಮಿತಿಯು ಕರೆ ಕೊಟ್ಟಿತು.

ಬರ ಮತ್ತು ನೆರೆ ಪರಿಹಾರ ನಿಧಿಯನ್ನು ಎಲ್ಲಾ ಕಾರ್ಮಿಕ ಸಂಘಗಳೂ ಜನವರಿ ತಿಂಗಳಲ್ಲಿ ಸಂಗ್ರಹಿಸಿ ಫೆಬ್ರವರಿ 15ರ ಮೊದಲು ಖಜಾಂಚಿಯವರಿಗೆ ತಲುಪಿಸಬೇಕೆಂದು ಸಭೆಯು ನಿರ್ದೇಶಿಸಿದೆ.

ಗುಲ್ಬರ್ಗಾ ಜಿಲ್ಲೆಯ ಷಹಬಾದಿನಲ್ಲಿರುವ ಎ.ಬಿ.ಎಲ್. ಬೇಡಕಾಕ್ ಕಾರ್ಮಿಕರ ಸಂಘಕ್ಕೆ ಧನ ಸಹಾಯ ಮಾಡಬೇಕೆಂದು ನವಂಬರ್ 9ರಂದು ರಾಜ್ಯ ಮಂಡಳಿಯು ಕೊಟ್ಟಿದ್ದ ಕರೆಯ ಪ್ರಕಾರ ಇನ್ನು ಹದಿನೈದು ದಿನಗಳ ಒಳಗಾಗಿ ಉಳಿದಿರುವ ಸಂಘಗಳು ಹಣವನ್ನು ಆ ಸಂಘಕ್ಕೆ ಕಳುಹಿಸಬೇಕೆಂದು ರಾಜ್ಯ ಸಮಿತಿ ಮನವಿ ಮಾಡಿದೆ.

ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳ ರಾಜ್ಯಗಳ ಎಡ ಸರ್ಕಾರಗಳ ಸಾಧನೆಗಳನ್ನು ಮತ್ತು ಪರ್ಯಾಯ ಧೋರಣೆಯನ್ನು ಎಲ್ಲಾ ಕಾರ್ಮಿಕರ ಮತ್ತು ಸಾರ್ವಜನಿಕರ ನಡುವೆ ಜನಪ್ರಿಯಗೊಳಿಸಬೇಕೆಂದು ಸಭೆಯು ಎಲ್ಲಾ ಕಾರ್ಮಿಕರ ಸಂಘಗಳಿಗೆ ಕರೆಕೊಟ್ಟಿದೆ.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗಳು ರಚನೆಯಾಗದ್ದಲ್ಲಿ ಅವುಗಳನ್ನು ರಚಿಸಲು ಸಭೆಯು ಆದೇಶಿಸಿತು.

1987 ಡಿಸೆಂಬರ್ 1 ರಿಂದ 3ರವರೆಗೆ ಚಂಡೀಗಢದಲ್ಲಿ ಸಿ.ಐ.ಟಿ.ಯು. ಕಾರ್ಯಕಾರಿ ಸಮಿತಿಯ ಬಗ್ಗೆ ಸಿ. ನಂಜುಂಡಪ್ಪ ಮತ್ತು ಎಸ್. ಸೂರ್ಯನಾರಾಯಣ ರಾವ್ ರಾಜ್ಯ ಸಮಿತಿಯ ಸಭೆಗೆ ವರದಿ ಮಾಡಿದರು:

ಫೆಬ್ರವರಿಮೊದಲವಾರದಲ್ಲಿ ಪ್ಯಾರಿಸ್ಸಿನಲ್ಲಿ 'ಆರ್ಥಿಕಭದ್ರತೆಯ'ಮೇಲೆನಡೆಯುವಜಾಗತಿಕಸಮ್ಮೇಳನಕ್ಕೆ ಚಂಡೀಗಢದಸಭೆಯು ಕಾ. ಸೂರ್ಯನಾರಾಯಣರನ್ನು ಪ್ರತಿನಿಧಿಯನ್ನಾಗಿಚುನಾಯಿಸಿರುವುದನ್ನು ಸ್ವಾಗತಿಸಿತು.

1987ರ ಹಿನ್ನೋಟ

ಯುದ್ಧ ಭೀತಿ ಇಲ್ಲದ ಜಗತ್ತು

(5ನೇ ಪುಟದಿಂದ)

ಮಾಣಿಕತೆಯಿಂದಸಾಗುತ್ತಿದೆ. ಆದರೂ ಸಾಮ್ರಾಜ್ಯಶಾಹಿಗಳು ಈಗಲೂ ಕತ್ತಿ ಮಸೆಯುತ್ತಲೇ ಇದ್ದಾರೆ.

ಇರಾನ್-ಇರಾಕ್ ಯುದ್ಧ ಈ ವರ್ಷವೂ ಮುಂದುವರಿದಿದೆ. ಹಡಗು ಸಾಗಾಣಿಕೆ ರಕ್ಷಣೆ ಕೊಡುವ ನೆಪದಲ್ಲಿ ಅಮೆರಿಕಾದ ಯುದ್ಧ ಹಡಗುಗಳು ಕೊಲ್ಲಿಯನ್ನು ಪ್ರವೇಶಿಸಿ ಪರಿಸ್ಥಿತಿಯನ್ನು ಇನ್ನಷ್ಟು ಸ್ಫೋಟಕಗೊಳಿಸಿದೆ.

1987 ಪಾಲೆಸ್ಟೀನಿಯಾ ವರ್ಷವೆಂದು ಕರೆಯಲ್ಪಟ್ಟಿತ್ತು. ಯಾಕೆಂದರೆ ಪ್ಯಾಲೆಸ್ಟೀನಿಯನ್ನರು ತಮ್ಮ ತಾಯ್ನಾಡಿನಲ್ಲಿಯೇ ನಿರಾಶ್ರಿತರಾಗಿ 40 ವರ್ಷಗಳು ಸಂದಿವರ್ಷವಿದು. ಈ ವರ್ಷ ನಡೆದ ಪ್ಯಾಲೆಸ್ಟೀನಿಯಾದ ದೇಶಭ್ರಷ್ಟ ಸಂಸತ್ತಿನ ಅಧಿವೇಶನ ಪ್ಯಾಲೆಸ್ಟೀನಿಯಾದ ವಿಮೋಚನಾ ಹೋರಾಟದಲ್ಲಿ ಮೂಡಿದ್ದ ಒಡಕನ್ನು ಸರಿಪಡಿಸಿ ಐಕ್ಯತೆಯನ್ನು ಮರು ಸ್ಥಾಪಿಸಿತು. ವರ್ಷ ಅಂತ್ಯವಾಗುತ್ತಿದ್ದಂತೆ ಇಸ್ರೇಲಿ ಝಿಯೋನಿಸ್ಟರುಆಕ್ರಮಿತ ಲೆಬನಾನ್ ಪ್ರದೇಶದಲ್ಲಿರುವ ಪ್ಯಾಲೆಸ್ಟೀನಿಯನ್ ನಿರಾಶ್ರಿತರ ಮೇಲೆ ನಡೆಸಿರುವ ಅಮಾನುಷ ದಾಳಿ ಜಗತ್ತಿನಾದ್ಯಂತ ಖಂಡನೆಗೊಳಗಾಗಿದ್ದರೂ ಇನ್ನೂ ಮುಂದುವರೆಯುತ್ತಿದೆ.

ನಮ್ಮ ನೆರೆಯ ದೇಶಗಳಲ್ಲಿನ ಪರಿಸ್ಥಿತಿ ಐಕ್ಯರಂಗದ ಓದುಗರಿಗೆ ಚೆನ್ನಾಗಿಯೇ ತಿಳಿದಿದೆ. ಶ್ರೀಲಂಕಾದಲ್ಲಿ ಸಾಮ್ರಾಜ್ಯಶಾಹಿಗಳ ತೂರಿಕೆಯನ್ನು ವಿಫಲಗೊಳಿಸಿದ ಒಪ್ಪಂದ ನಡೆಯಿತು. ಆದರೆ ನಂತರ ಅದನ್ನು ಬುಡಮೇಲು ಮಾಡುವಲ್ಲಿ ಎಲ್. ಟಿ ಟಿ. ಇ. ಹಾಗೂ ಸಿಂಹಳೀ ಪ್ರತಿಗಾಮಿಗಳ ಪ್ರಯತ್ನ, ಇದರಿಂದಾಗಿ ಭಾರತದ ಶಾಂತಿಪಾಲನ ಪಡೆ ಎದುರಿಸಬೇಕಾದ ಸ್ಥಿತಿ ಎಲ್ಲರಲ್ಲೂ ಆತಂಕ ಮೂಡಿಸಿದೆ. ಬಾಂಗ್ಲಾ ದೇಶದಲ್ಲಿ ಪ್ರಜಾಪ್ರಭುತ್ವದ ಮರು ಸ್ಥಾಪನೆ ಹೋರಾಟ ತೀವ್ರಗೊಂಡಿದೆ. ಬಹುಶಃ ನಿರ್ಣಾಯಕ ಘಟ್ಟವನ್ನು ಸಮೀಪಿಸುತ್ತಿದೆ. ಪಾಕಿಸ್ತಾನ ಪರಮಾಣು ಬಾಂಬ್ ಮಾಡುವ ಸಾಮರ್ಥ್ಯ, ಸನ್ನಾಹ ಇದೇ ಎಂಬ ಸುದ್ದಿ ಅಮೇರಿಕನ್ ಆಳುವ ವಲಯಗಳಲ್ಲೂ ಸ್ವಲ್ಪ ಕಿರಿಕಿರಿ ಉಂಟುಮಾಡಿದ್ದರೂ ಅದನ್ನೂ ಭಾರತ ವಿರುದ್ಧವೇ ತಿರುಗಿಸುವಲ್ಲಿ ಅವು ಯಶಸ್ವಿಯಾಗಿವೆ. ಪಾಕ್‌ನ ಬಾಂಬಿಗೆ ಭಾರತವೇ ಕಾರಣ ಎಂಬ ವಾದ ಹೂಡಿ ರಾಜೀವ್‌ಗಾಂಧಿಯವರು ಡಂಗುರ ಸಾರುತ್ತಿದ್ದ ತಮ್ಮ ಇತ್ತೀಚಿನ ಅಮೇರಿಕನ್ ಭೇಟಿಯ "ಸಾಧನೆ" ಗಳನ್ನು ನಿಷ್ಫಲಗೊಳಿಸುವ ಬೆದರಿಕೆಯೊಡ್ಡಲಾಗಿದೆ. ಆಂತರಿಕವಾಗಿ ಪಾಕಿಸ್ತಾನದಲ್ಲೂ ಪ್ರಜಾಪ್ರಭುತ್ವ ಶಕ್ತಿಗಳ ಹೋರಾಟ ಅಷ್ಟೊಂದು ತೀವ್ರವಾಗಿಯಲ್ಲದಿದ್ದರೂ ಮುಂದುವರೆಯುತ್ತಿದೆ.

●

ಎಸ್. ಎಫ್. ಐ. ಬಳ್ಳಾರಿ ಜಿಲ್ಲಾ ಸಮ್ಮೇಳನ

ಬಳ್ಳಾರಿ ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಅತ್ಯಂತ ಬಲಿಷ್ಟ ಸಂಘಟನೆಯಾದ ಎಸ್. ಎಫ್. ಐ. ಯ ನಾಲ್ಕನೆಯ ಸಮ್ಮೇಳನ ಹಗರಿಬೊಮ್ಮನ ಹಳ್ಳಿಯಲ್ಲಿ ಡಿ. 27, 28 ರಂದು ಯಶಸ್ವಿಯಾಗಿ ನೆರವೇರಿತು.

ತಾ|| 27 ರಂದು ಮುಂಜಾನೆ 10 ಗಂಟೆಗೆ ಜಿಲ್ಲಾಧ್ಯಕ್ಷರಾದ ಎನ್. ಪ್ರಸನ್ನ ಕುಮಾರ ಅವರಿಂದ ಧ್ವಜಾ ರೋಹಣವಾಗಿ, ಎಸ್. ಎಫ್. ಐ. ಸಿದ್ಧಾಂತಕ್ಕಾಗಿ ಮಡಿದವರಿಗೆಲ್ಲಾ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಜಿ. ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನವನ್ನು ವಾಸವಿ ಶಾಲೆಯ ಮುಖ್ಯೋಪಾಧ್ಯಾಯರಾದ ವೈ. ಭೀಮಸೇನಾಚಾರ್ ಅವರು ಉದ್ಘಾಟನೆ ಮಾಡುತ್ತ ಕೇಂದ್ರ ಸರಕಾರದ ಶಿಕ್ಷಣ, ಆರ್ಥಿಕ ನೀತಿಗಳ ಅಪಾಯದ ಕುರಿತು ವಿದ್ಯಾರ್ಥಿಗಳನ್ನು ಎಚ್ಚರಿಸಿ ಅವುಗಳ ವಿರುದ್ಧ ಹೋರಾಡಲು ಕರೆ ನೀಡಿದರು. ಅಧ್ಯಾಪಕರಾದಹಿ. ಮು. ಗುರುಬಸವರಾಜ ಅವರು ಎಸ್. ಎಫ್. ಐ. ಸಂಘಟನೆ ಸಮಾಜದ ಆಗು ಹೋಗುಗಳ ಬಗ್ಗೆ ಸ್ಪಂದಿಸುವ ಶಕ್ತಿಯಾಗಿ ಬೆಳೆಯಲೆಂದು ಹಾರೈಸಿದರು. ಜಿಲ್ಲಾ ಪರಿಷತ್ ಸದಸ್ಯರಾದ ಜಿ. ವೆಂಕಣ್ಣ ಅವರೂ ಮಾತನಾಡಿದರು. ಎಚ್. ಪ್ರಕಾಶರ ಸ್ವಾಗತ, ರಂಗನಾಥ ಅವರ ವಂದನಾರ್ಪಣೆನೊಂದಿಗೆ ಉದ್ಘಾಟನಾ ಕಾರ್ಯಕ್ರಮ ಮುಗಿಯಿತು.

ತಾ|| 28 ರಂದು ಕಾರ್ಯದರ್ಶಿ ಗುರುಶಾಂತ ಅವರು ಮಂಡಿಸಿದ ವರದಿ ಮೇಲೆ ನಡೆದ ಚರ್ಚೆಯಲ್ಲಿ ಪ್ರತಿನಿಧಿಗಳು ಭಾಗವಹಿಸಿದ್ದರು. 150 ಪ್ರತಿನಿಧಿಗಳು ಹಾಜರಿದ್ದರು.

ಜನವರಿ 16 ರಿಂದ 18 ರ ವರೆಗೆ ನಡೆಯುವ ಐದನೆಯ ರಾಜ್ಯ ಸಮ್ಮೇಳನಕ್ಕೆ 20 ಪ್ರತಿನಿಧಿಗಳನ್ನು ಆರಿಸಲಾಯಿತು. ಸಂಜೆ ಮೆರವಣಿಗೆಯ ನಂತರ ಯು. ಷಣ್ಮುಖಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಎಲ್. ಮಂಜುನಾಥ, ಜಿ. ಯು. ವೀರಸಂಗಯ್ಯ, ಎಸ್. ವೈ. ಗುರುಶಾಂತ್ ಮೊದಲಾದವರು ಭಾಷಣ ಮಾಡಿದರು. ಯು. ಷಣ್ಮುಖಪ್ಪ, ಅಧ್ಯಕ್ಷ ಎಲ್. ಮಂಜುನಾಥ ಕಾರ್ಯದರ್ಶಿಯನ್ನೊಳಗೊಂಡ ಹೊಸ ಸಮಿತಿಯನ್ನು ಆರಿಸಲಾಯಿತು.

ಮಲಿನತೆ ಬಯಲು

(4ನೇ ಪುಟದಿಂದ)

ಎಂಬ ಪ್ರಶ್ನೆಯಲ್ಲೂ ವ್ಯಕ್ತವಾದವು. ಎಡ ಪಕ್ಷಗಳು ವಿ. ಆರ್. ಕೃಷ್ಣ ಅಯ್ಯರನ್ನು ಅಭ್ಯರ್ಥಿಯಾಗಿ ಸೂಚಿಸಿದರೆ, ಉಳಿದ ವಿರೋಧ ಪಕ್ಷಗಳು ಜೈಲ್‌ಸಿಂಗ್‌ರನ್ನೇ ಅಭ್ಯರ್ಥಿಯಾಗಿ ನಿಲ್ಲಿಸಿ ಬಿಕ್ಕಟ್ಟಿನ ದುರ್ಲಾಭ ಪಡೆಯಲು ಇಷ್ಟಪಟ್ಟವು. ಎಡ ಪಕ್ಷಗಳ ನೀತಿಯುತ ಧೋರಣೆಯೇ ಗೆದ್ದಿತು. ಎಲ್ಲಾ ವಿರೋಧ ಪಕ್ಷಗಳೂ ಎಡಪಕ್ಷಗಳ ಧೋರಣೆಗೆ ಒಪ್ಪಬೇಕಾದುದು ದೇಶದ ರಾಜಕೀಯದಲ್ಲಿ ಎಡ ಪಕ್ಷಗಳ ಹೆಚ್ಚಿರುವ ಪ್ರಭಾವಕ್ಕೆ ಸ್ಪಷ್ಟ ಸೂಚಕವಾಗಿತ್ತು.

ರಾಜ್ಯ ಚುನಾವಣೆಗಳಲ್ಲಿ ಕಾಂಗ್ರೆಸ್ ಪರಾಭವ

ಕಾಂಗ್ರೆಸ ಜನ ವಿರೋಧಿ ಆರ್ಥಿಕ ನೀತಿಗಳು ಉಚ್ಚ ವಲಯಗಳಲ್ಲಿ ಭ್ರಷ್ಟಾಚಾರ, ರಾಜಕೀಯ ಬಿಕ್ಕಟ್ಟು ಮತ್ತು ವಿರೋಧ ಪಕ್ಷಗಳ ಹೆಚ್ಚುತ್ತಿರುವ ಬಲ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ದೊಡ್ಡ ಮಾರ್ಪಾಡುಗಳನ್ನು ತಂದವು. ಕೇರಳ, ಕೇಂದ್ರ ಸರ್ಕಾರ, ಕಾಂಗ್ರೆಸ್‌ಗಳ ಶತ ಪ್ರಯತ್ನದ ನಂತರವೂ ಕಾಂಗ್ರೆಸ್ ನಾಯಕತ್ವದ ರಂಗವನ್ನು ಜನತೆ ಪರಾಭವಗೊಳಿಸಿತು. ಸಿ. ಪಿ. ಎಂ. ನಾಯಕತ್ವದ ರಂಗ ಅಧಿಕಾರಕ್ಕೆ ಬಂತು. ಪ. ಬಂಗಾಳದಲ್ಲಿ ಎಡರಂಗ ಕಾಂಗ್ರೆಸ್ ನಿರೀಕ್ಷೆಗೆ ವಿರುದ್ಧವಾಗಿ ತನ್ನ ಬಲವನ್ನು ಹೆಚ್ಚಿಸಿಕೊಂಡಿತು. ಕಾಂಗ್ರೆಸ್ ಭಾರೀ ಪರಾಭವ ಹೊಂದಿತು. ಆದರೆ ರಾಜೀವ್ ಮತ್ತು ಕಾಂಗ್ರೆಸ್‌ಗೆ ತೀರಾ ಮುಖಭಂಗವಾದದ್ದು ಹರ್ಯಾಣ ಪರಾಭವದಿಂದ. ಹಿಂದೀ ಪ್ರದೇಶದಲ್ಲಿ ಪ್ರಭಾವದ ಮೊದಲ ಪರೀಕ್ಷೆಯಾಗಿದ್ದ ಈ ಚುನಾವಣೆ ರಾಜಕೀಯ ಗಾಳಿ ಎತ್ತ ಬೀಸುತ್ತಿದೆ ಎಂದು ತಿಳಿಸಿತು. ಈ ಮೂರು ರಾಜ್ಯಗಳಲ್ಲಿ ಪರಾಭವವನ್ನು, ಕಾಶ್ಮೀರದಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಜತೆ ಮೈತ್ರಿ ಕೂಟಕ್ಕೆ ಮತ್ತು ನಾಗಾಲ್ಯಾಂಡಿನಲ್ಲಿ ಕಾಂಗ್ರೆಸ್‌ಗೆ ಜಯ ಯಾವುದೇ ರೀತಿಯಲ್ಲಿ ತೊಡೆದು ಹಾಕಲಿಲ್ಲ. ರಾಜೀವ ಗಾಂಧಿಯ ಚುನಾವಣೆ ಗೆಲ್ಲುವ 'ಶಕ್ತಿ' ಬಗ್ಗೆ ಕಾಂಗ್ರೆಸ್ ಸದಸ್ಯರಿಗೆ ಅನುಮಾನ ಆರಂಭವಾಯಿತು. ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಈ ವರ್ಷದಲ್ಲಿ ಗರಿಗೆದರಿಕೊಂಡು ದೇಶದ ರಾಜಕೀಯದಲ್ಲಿ ಮುಖ್ಯಪಾತ್ರ ವಹಿಸುತ್ತಿವೆ. ಜನತಾ ಚಳುವಳಿಗಳು ಜಾಥಾಗಳು, ರ್‍ಯಾಲಿಗಳ ಮಹಾಪೂರವೇ ಈ ವರ್ಷದಲ್ಲಿ ಕಂಡು ಬಂತು ಆಳುವ ಪಕ್ಷ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಎಡ ಪ್ರಜಾಸತ್ತಾತ್ಮಕ ಪಕ್ಷಗಳ ಐಕ್ಯ ಕಾರ್ಯಚರಣೆ ಚಳುವಳಿ ಮುನ್ನಡೆ ಸಾಧಿಸಿದೆ.

ವಿಚ್ಛಿದ್ರಕಾರಿ ಶಕ್ತಿಗಳು

ಈ ವರ್ಷದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ತಮ್ಮ ಕೆಲಸವನ್ನು ಅವ್ಯಾಹತವಾಗಿ ಮುಂದುವರಿಸಿದವು. ಇವುಗಳಿಂದ ದೇಶದ ಐಕ್ಯತೆ ಸಮಗ್ರತೆಗೆ ಅಪಾಯ ಮುಂದುವರಿದಿದೆ ಇವುಗಳೊಂದಿಗೆ ಕಾಂಗ್ರೆಸ್ ಶಾಮೀಲು ಸಹ ಹಾಗೆ ಮುಂದುವರಿದಿದೆ ಇನ್ನೂ ಹೆಚ್ಚಾಗಿದೆ. ಪಂಜಾಬ್ ಸಮಸ್ಯೆ ಪರಿಹಾರದ ದಿಕ್ಕಿನಿಂದ ಇನ್ನಷ್ಟು ದೂರ ಸರಿದಿದೆ. ಇದರಲ್ಲಿ ಕಾಂಗ್ರೆಸ್ ಕೇಂದ್ರ ಸರಕಾರದ ಸಂದರ್ಭಸಾಧಕ ನೀತಿಯದ್ದು ದೊಡ್ಡ ಪಾತ್ರ ಬರ್ನಾಲ ಸರ್ಕಾರಕ್ಕೆ ಎಲ್ಲಾ ರಾಜಕೀಯ ಸಹಾಯ ಒದಗಿಸುವುದು ಮತ್ತು ರಾಜೀವ್-ಲೊಂಗೋವಾಲ್ ಒಪ್ಪಂದ ಜಾರಿ ಮಾಡುವುದು ಬಿಟ್ಟು ಕೇಂದ್ರ ಸರ್ಕಾರದ ವಿಳಂಬ ನೀತಿಯಿಂದಾಗಿ, ಬರ್ನಾಲ ಸರ್ಕಾರದ ಹತೋಟಿ ಮೀರಿ ಖಲಿಸ್ತಾನ ಭಯೋತ್ಪಾದಕರ ಹತ್ಯಾಕಾಂಡ ಮುಂದುವರಿಯಿತು. ಖಲಿಸ್ತಾನಿಗಳು ಸಿಖ್ ಧರ್ಮಗುರುಗಳ ಮೂಲಕ ಬರ್ನಾಲರನ್ನು ಧರ್ಮಬಹಿಷ್ಕಾರ ಮಾಡುವ ಧೈರ್ಯ ಮಾಡಿದರೂ, ಅಕಾಲಿದಳವನ್ನು ಒಡೆಯಲಾಯಿತು. ಇಂತಹ ಸ್ಥಿತಿಯಲ್ಲಿ ಹರ್ಯಾಣ ಚುನಾವಣೆ ಗೆಲ್ಲುವ ಸಂಕುಚಿತ ಉದ್ದೇಶದಿಂದ ಬರ್ನಾಲ ಸರ್ಕಾರ ವಜಾ ಮಾಡಿ ಅಧ್ಯಕ್ಷೀಯ ಆಡಳಿತ ತರಲಾಯಿತು. ಅಧ್ಯಕ್ಷ ಆಡಳಿತದಲ್ಲಿ ಹಿಂಸಾಚಾರ ಇನ್ನಷ್ಟು ಹೆಚ್ಚಿದೆ. ಖಲಿಸ್ತಾನಿಗಳನ್ನು ರಾಜಕೀಯವಾಗಿ ಪ್ರತ್ಯೇಕಿಸುವ ಕೆಲಸ ಸಾಧ್ಯವಾಗಿಲ್ಲ. ಪಂಜಾಬ್ ಸಮಸ್ಯೆ ಉಲ್ಬಣಾವಸ್ಥೆಗೆ ಏರಿದೆ. ಇದೇ ರೀತಿಯ ಸಂದರ್ಭಸಾಧಕ ನೀತಿಗಳಿಂದಾಗಿ ಡಾರ್ಜಿಲಿಂಗ್‌ನಲ್ಲಿ ಜಿ. ಎನ್. ಎಲ್. ಎಫ್, ತ್ರಿಪುರಾದಲ್ಲಿ ಟಿ.ಎನ್.ವಿ-ಟಿ.ಯು.ಜೆ.ಎಸ್, ಇತರ ಈಶಾನ್ಯ ಭಾರತದ ಪ್ರತ್ಯೇಕತಾವಾದಿ ಶಕ್ತಿಗಳ ಹಿಂಸಾಚಾರ ಮುಂದುವರಿಸಿವೆ. ತೀವ್ರ ಸವಾಲು ಒಡ್ಡಿವೆ.

ಕೋಮು ಪರಿಸ್ಥಿತಿಸಹ ಬಿಗಡಾಯಿಸಿದೆ. ಮೀರತ್‌ನಲ್ಲಿ ಬಹಳಷ್ಟು ದೀರ್ಘಕಾಲ ನಡೆದ ದಂಗುಬಡಿಸಿದ ಕೋಮು ಹಿಂಸಾಚಾರ, ಗುಜರಾತ್‌ನ ಗಲಭೆಗಳು, ಹಿಂದೂ-ಮುಸ್ಲಿಂ ಮತಾಂಧ ಶಕ್ತಿಗಳು ಬೆಳೆಯುತ್ತಿರುವುದು ವರ್ಷದುದ್ದಕ್ಕೂ ಕಂಡುಬಂತು. ರಾಜಸ್ತಾನದ ದೇವರಾಲಾದಲ್ಲಿ ರೂಪಕನ್ವರ್ ಎಂಬ ಮಹಿಳೆಯ ಬಹಿರಂಗ ಕೊಲೆ-ಸತಿಯ ಹೆಸರಿನಲ್ಲಿ ಇಡೀ ದೇಶವನ್ನು ದಂಗು ಬಡಿಸಿತು. ಈ ಪಾಳೆಗಾರಿ ಮೌಲ್ಯಗಳನ್ನು ಎತ್ತಿಹಿಡಿಯುವ ಶಕ್ತಿಗಳು ಮತ್ತು ಅವನ್ನು ಬಗ್ಗು ಬಡಿಯುವಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳ ದೌರ್ಬಲ್ಯ ಕಣ್ಣಿಗೆ ಹೊಡೆಯುವಂತಿತ್ತು. ದೇಶದಲ್ಲಿ ಇನ್ನೂ ಪ್ರಬಲವಾಗಿರುವ ಪಾಳೆಯಗಾರಿ ವ್ಯವಸ್ಥೆಯ ಪ್ರತೀಕ.

ಶ್ರೀಲಂಕಾ ಸಮಸ್ಯೆ

ಶ್ರೀಲಂಕಾ ಸಮಸ್ಯೆ ಈ ವರ್ಷ ಉಲ್ಬಣಾವಸ್ಥೆಗೆ ಏರಿದೆ. ತಮಿಳು ಉಗ್ರಗಾಮಿ ಗುಂಪುಗಳು ಶ್ರೀಲಂಕಾ ಸೈನ್ಯದ ನಡುವೆ ಗೆರಿಲ್ಲಾ ಸಮರದಿಂದ ಸಾವಿರಾರು ಶ್ರೀಲಂಕಾ ನಿರಾಶ್ರಿತರು ಭಾರತಕ್ಕೆ ಬಂದರು. ಅಲ್ಲದೆ ಇಸ್ರೇಲ್, ಪಾಕಿಸ್ತಾನದ ಪಿತೂರಿಗಳು ಶ್ರೀಲಂಕಾ ನೆಲದಿಂದ ಭಾರತದ ಭದ್ರತೆಗೆ ಭಂಗ ತರುವ ಸಂಚಿನಲ್ಲಿ ತೊಡಗಿದ ಸುಳಿವಿನ ಆಧಾರದ ಮೇಲೆ ಭಾರತ ಸರ್ಕಾರ ಕ್ರಿಯಾತ್ಮಕ ಧೋರಣೆ ತೆಗೆದುಕೊಳ್ಳಬೇಕಾಯಿತು. ವಿಮಾನಗಳ ಮೂಲಕ ಪರಿಹಾರ ಸಾಮಗ್ರಿ, ಪೂರೈಕೆಯಿಂದ ಆರಂಭವಾಗಿ ಭಾರತ-ಶ್ರೀಲಂಕಾ ಒಪ್ಪಂದದ ಪ್ರಕಾರ ಶಾಂತಿ ಸೇನೆ ಶ್ರೀಲಂಕಾಕ್ಕೆ ತೆರಳಿತು. ಆದರೆ ಎಲ್. ಟಿ.ಟಿ.ಇ. ಹಟಮಾರಿ ಧೋರಣೆ ಮತ್ತು ಶ್ರೀಲಂಕಾ ಸರ್ಕಾರದ ಧೋರಣೆಗಳಿಂದಾಗಿ, ಶಾಂತಿ ಸೇನೆ ತನ್ನ ಕೆಲಸ ಮುಂದುವರಿಸಲು ಯುದ್ಧ ಆರಂಭಿಸಬೇಕಾಗಿ ಬಂದಿದೆ.

ಭಾರತ- ಸೋವಿಯೆತ್ ಉತ್ಸವ

ವಿಶ್ವದಲ್ಲೆ ಮೊದಲ ಬಾರಿಗೆ ಎರಡು ದೇಶಗಳ ಜನತೆಯ ನಡುವೆ ಅತ್ಯಂತ ವ್ಯಾಪಕವಾದ ಸಾಂಸ್ಕೃತಿಕ ಸಂಬಂಧವನ್ನು ಕುದುರಿಸುವ ಗಾಢವಾಗಿಸುವ ಎರಡು ಉತ್ಸವಗಳು ಈ ವರ್ಷದ ಗಮನಾರ್ಹ ಸಾಂಸ್ಕೃತಿಕ ಮೈಲಿಗಲ್ಲುಗಳು. ಸೋವಿಯೆತ್ ಒಕ್ಕೂಟದಲ್ಲಿ ಆರಂಭವಾಗಿರುವ ಭಾರತ ಉತ್ಸವ ಮತ್ತು ಭಾರತದಲ್ಲಿ ಜನರ ಮನಸ್ಸು ಸೂರೆಗೈದಿರುವ ಸೋವಿಯೆತ್‌ಉತ್ಸವ. ಈ ಎರಡು ಉತ್ಸವಗಳು ಎರಡೂ ಜನತೆಯನ್ನು ಹತ್ತಿರಕ್ಕೆ ತಂದಿವೆ. ಮಧುರ ಬಾಂಧವ್ಯ ಬೆಸೆದಿವೆ. ಸೋವಿಯೆತ್ ಉತ್ಸವವಂತೂ ಕಮ್ಯುನಿಸ್ಟ್‌ವಿರೋಧಿ ಬೂರ್ಜ್ವಾ ಅಪಪ್ರಚಾರವನ್ನು ಕೊಚ್ಚಿ ಹಾಕಿದೆ. ಸೋವಿಯೆತ್ ಸಮಾಜದ ನಿಜ ಸ್ವರೂಪವನ್ನು ತೋರಿಸಿ ಕೊಟ್ಟಿದೆ.

●

ಬಿಜಾಪುರದಲ್ಲಿ ಸಿ.ಪಿ.ಐ.(ಎಂ) ಪಕ್ಷದ ಸಭೆ

1.1.88 ರಂದು ಬಿಜಾಪುರ ಪಕ್ಷದ ಜಿಲ್ಲಾ ಸಮಿತಿ ಸಭೆ ಸೇರಲಾಗಿತ್ತು. ಸಭೆಯಲ್ಲಿ ಇತ್ತೀಚಿಗೆ ನಿಧನರಾದ ಕಾಂ.ಪಿ. ರಾಮಮೂರ್ತಿ, ಎಂ.ಜಿ.ಆರ್, ಹಾಗೂ ಸಿ.ಪಿ.ಐ.(ಎಂ) ಪ.ಬಂಗಾಳದ ಮಾಜಿ ಮಂತ್ರಿಗಳಾದ ಕೃಷ್ಣಪಾದ ಘೋಷ ಇವರಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಜನತಾ ಸರ್ಕಾರವು ಸರ್ಕಾರಿ ನೌಕರರ ತಿಂಗಳ ಸಂಬಳವನ್ನು ಪೋಸ್ಟ್ ಆಫೀಸನಲ್ಲಿ ಉಳಿತಾಯ ಖಾತೆಯಲ್ಲಿ ತೊಡಗಿಸಲು ಆದೇಶ ಮಾಡಿದ್ದನ್ನು ತೀವ್ರವಾಗಿ ಖಂಡಿಸಲಾಯಿತು. ಪಿ.ಎಸ್.ಐ. ಕೊಳಮಟ್ಟೆಯವರ ಮೇಲಿಭ್ರಷ್ಟಾಚಾರದ ಆರೋಪ ವಿದ್ದು ಸರ್ಕಾರ ತೀವ್ರ ಕ್ರಮಕೈಗೊಳ್ಳಬೇಕೆಂದು ಪಕ್ಷದ ಕಾರ್ಯದರ್ಶಿಗಳಾದ ಭೀಮಸಿ ಕಲಾದಗಿಯವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

"ಸ್ವಚ್ಛ ಪುರುಷ"ನ ಮಲಿನತೆ ಬಯಲು

1987 ಬಹಳ ರೀತಿಗಳಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ವರ್ಷವಾಗಿತ್ತು. ಸುದ್ದಿ ಮಾಡುವ ಘಟನೆಗಳು ತುಂಬಿ ತುಳುಕಿದ ವರ್ಷ ಇದಾಗಿತ್ತು.

ಈ ಶತಮಾನದಲ್ಲೇ ಅತ್ಯಂತ ಭೀಕರವೆನಿಸಿದ ಬರ ದೇಶದ ಬಹುದೊಡ್ಡ ಭಾಗವನ್ನು ಕಾಡಿತು. ವರ್ಷದ ಮಳೆಯ ಅಭಾವ ಪರಿಸ್ಥಿತಿಯನ್ನು ವಿಕೋಪಕ್ಕೆ ತೆಗೆದುಕೊಂಡು ಹೋಗಿತ್ತು. ಬರದ ಬಗ್ಗೆ ಎಲ್ಲಾ ಕಡೆ ಅಧಿಕೃತ ಹೇಳಿಕೆಗಳು, ಘೋಷಣೆಗಳು ಬಿಟ್ಟರೆ ತಾತ್ಕಾಲಿಕ ಪರಿಹಾರದ ಬಗ್ಗೆ ಕುತರ್ಾಗಲಿ, ದೂರಗಾಮಿ ಯೋಜನೆಗಳನ್ನು ಆರಂಭಿಸುವ ರಾಜಕೀಯ ಇಚ್ಛೆಯಾಗಲಿ ಕಂಡು ಬರಲಿಲ್ಲ. ಒರಿಸ್ಸಾ ಮತ್ತಿತರ ರಾಜ್ಯಗಳಲ್ಲಿ ಹಸಿವಿನಿಂದ ಸಾವಿನ ವರದಿಗಳು ಬಂದಿವೆ.

1987 ಯಾವುದೇ ಅನುಮಾನವಿಲ್ಲದೆ, ರಾಜೀವ ಮತ್ತು ಅವರ ಸರ್ಕಾರದ ವರ್ಚಸ್ಸು, ಪ್ರಭಾವ, ಮತ್ತು ಜನ ಬೆಂಬಲ (ನೆಲೆ) ಕಚ್ಚಿದ ವರ್ಷವೆನ್ನಬಹುದು. ವರ್ಷದ ಎಲ್ಲಾ ರಾಜಕೀಯ ಘಟನೆಗಳನ್ನು ಕೂಲಂಕಶವಾಗಿ ಗಮನಿಸಿದರೆ, ಅವೆಲ್ಲಾ ಇದೇ ತೀರ್ಮಾನದತ್ತ ಬೆಟ್ಟು ಮಾಡುತ್ತವೆ. ಒಂದಾದ ಮೇಲೊಂದರಂತೆ ರಾಜೀವ್ ಗಾಂಧಿ ಸ್ವತಃ ಮತ್ತು ಅವರ ಸರ್ಕಾರ ಭಾರಿ ಭ್ರಷ್ಟಾಚಾರದ ಆಪಾದನೆಗಳಿಗೆ ತುತ್ತಾದವು. ಈ ಆಪಾದನೆಗಳ ಜತೆಗೆ ಮತ್ತು ಅದರಿಂದಾಗಿ ಕಾಂಗ್ರೆ ಪಕ್ಷದಲ್ಲಿ ಹಿಂದೆಂದೂ ಕಾಣದ ಭಾರೀ ರಾಜಕೀಯ ಬಿಕ್ಕಟ್ಟು ಉಂಟಾಯಿತು. ಇವೆರಡೂ 1988ರಲ್ಲೂ ಇದೇ ರೀತಿ ಮುನ್ನಡೆಯುವ ಸೂಚನೆಗಳಿವೆ.

ಭಾರಿ ಹಗರಣಗಳು

ವರ್ಷದ ಆರಂಭದಲ್ಲೇ ರಾಜೀವ್ ಗಾಂಧಿಯವರು ಹಠಾತ್ತಾಗಿ ವಿ.ಪಿ. ಸಿಂಗ್‌ರನ್ನು ಅರ್ಥ ಖಾತೆಯಿಂದ ರಕ್ಷಣಾ ಖಾತೆಗೆ ವರ್ಗಾಯಿಸಿದರು. ಇದಕ್ಕಿಂತ ಮೊದಲೇ ದೊಡ್ಡ ಕೈಗಾರಿಕೋದ್ಯಮಗಳ ಮೇಲೆ ಆರ್ಥಿಕ ಅಪರಾಧಗಳ ವಿರುದ್ಧ ವಿ.ಪಿ.ಸಿಂಗ್‌ರ ತೀವ್ರ ಕಾರ್ಯಾಚರಣೆಯ ಬಗ್ಗೆ ರಾಜೀವ್ ಸಾರ್ವಜನಿಕವಾಗಿಯೇ ತಮ್ಮ ಭಿನ್ನಾಭಿಪ್ರಾಯ ಪ್ರಕಟಿಸಿದ್ದರು. ವಿ.ಪಿ. ಸಿಂಗ್‌ರ ವರ್ಗಾವಣೆಗೆ, ಪಾಕಿಸ್ತಾನ ಗಡಿಯಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿಯ ಕಾರಣ ಕೊಡಲಾಯಿತಾದರೂ, ಅದನ್ನು ಯಾರೂ ನಂಬಲಿಲ್ಲ. ಆ ಮೇಲಿನ ಘಟನೆಗಳಂತೂ ಇದನ್ನು ಪುಷ್ಟಿಗೊಳಿಸಿದವು. ಇದೇ ಸಮಯದಲ್ಲಿ ವಿದೇಶಿ ಖಾತೆಯ ಕಾರ್ಯದರ್ಶಿ ವೆಂಕಟೇಶ್ವರನ್‌ರನ್ನು ವಜಾ ಮಾಡಿದ ರೀತಿ ರಾಜೀವ್‌ರ ಉದ್ಧಟತನದ ಹೊಸ ಹಂತಕ್ಕೆ ನಾಂದಿಯಾಯಿತೆನ್ನಬಹುದು.

ವರ್ಷದಲ್ಲಿ ಮೊದಲು ಬಯಲಾದದ್ದು ಫೇರ್‌ಫೇಕ್ಸ್ ಹಗರಣ. ಕೈಗಾರಿಕೋದ್ಯಮಗಳು ವಿದೇಶದಲ್ಲಿ ಇಟ್ಟಿರುವ ಕಪ್ಪು ಹಣ, ನಡೆಸುತ್ತಿರುವ ಆರ್ಥಿಕ ವ್ಯವಹಾರಗಳ ತನಿಖೆಗೆ ಸಿ.ಐ.ಎ.ಸಂಬಂಧ ಹೊಂದಿದ ಫೇರ್‌ಫೇಕ್ಸ್ ಸಂಸ್ಥೆಯ ಸಹಾಯ ಪಡೆಯಲು ನಿರ್ಧರಿಸಿದ ರಾಜೀವ್ ಸರ್ಕಾರದ ನಿರ್ಣಯದ ಬಗ್ಗೆ ಈ ಹಗರಣ ಸಂಬಂಧಿಸಿತ್ತು. ಇದು ಮಂತ್ರಿ ಮಂಡಲದ ನಿರ್ಧಾರವೇ ಅಲ್ಲವೇ ಮತ್ತು ದೇಶದ ಭದ್ರತೆ ಸಮಗ್ರತೆಗೆ ಈ ನಿರ್ಧಾರದಿಂದ ಅಪಾಯವಿಲ್ಲವೇ ಎಂಬ ಬಗ್ಗೆ ವಿವಾದವೆದ್ದಿತು. ಈಗ ರಕ್ಷಣಾ ಖಾತೆಯಲ್ಲಿದ್ದ ವಿ.ಪಿ.ಸಿಂಗ್ ಇದರ ಬಗ್ಗೆ ಜವಾಬ್ದಾರಿ ತೆಗೆದುಕೊಂಡರು. ಈ ಇಡೀ ಹಗರಣದ ಬಗ್ಗೆ ತನಿಖೆ ಮಾಡಲು ಪಾರ್ಲಿಮೆಂಟರಿ ಸಮಿತಿಗೆ ವಿರೋಧ ಪಕ್ಷಗಳು ಒತ್ತಾಯಿಸಿದರೆ, ಸರ್ಕಾರ ಈಗ ವಿವಾದದ ಸುಳಿಯಲ್ಲಿರುವ ಠಕ್ಕರ ನಟರಾಜನ್ ಆಯೋಗವನ್ನು ನೇಮಿಸಿ ಈ ಹಗರಣದಿಂದ ತಾತ್ಕಾಲಿಕವಾಗಿ ಬಿಡುಗಡೆ ಹೊಂದಲು ಪ್ರಯತ್ನಿಸಿತು

ಆದರೆ ಈಗ ರಕ್ಷಣಾ ಖಾತೆಯಲ್ಲಿದ್ದ ವಿ.ಪಿ.ಸಿಂಗ್ ಪ.ಜರ್ಮನಿಯಿಂದಭಾರತದರಾಯಭಾರಿ ಕಳಿಸಿದ ತಂತಿಯಆಧಾರದ ಮೇಲೆ ಇಲಾಖಾ ತನಿಖೆ ಆರಂಭಿಸಿದ್ದು ಪುನಃ ದೊಡ್ಡ ಸುದ್ದಿಯಾಯಿತು. ತಂತಿ ಎಚ್.ಡಿ.ಡಬ್ಲ್ಯು ಸಬ್ ಮೇರಿನ್‌ಗಳ ಖರೀದಿಯಲ್ಲಿದ್ದ ಏಜಂಟರುಗಳಿಗೆ ಸುಮಾರು 30 ಕೋಟಿಗಳ 'ಲಂಚ' ನೀಡಿದ ಆಪಾದನೆ ಬಗೆಗಿನ ರಾಯಭಾರಿಗೆ ದೊರಕಿದ ಸುಳಿವಾಗಿತ್ತು. ಈ ಹಣವನ್ನು ಏಜಂಟರುಗಳಿಗೆ ಮತ್ತು ಅಧಿಕಾರಿಗಳಿಗೆ ಈ ಸಬ್ ಮೇರಿನ್ ಕೊಳ್ಳಲು ಲಂಚವಾಗಿ ಹಂಚಲಾಯಿತು ಎಂದು ತಿಳಿದು ಬಂದಿತ್ತು. ಈ ಏಜಂಟರುಗಳು ಯಾರು ಮತ್ತು ಯಾರ್‍ಯಾರು ಈ ಲಂಚ ಸ್ವೀಕರಿಸಿದರು ಎಂಬುದು ರಾಜಕೀಯವಾಗಿ ವಿಸ್ಫೋಟಕ ಪ್ರಶ್ನೆಯಾಗಿತ್ತು. ಇಷ್ಟು ಹೊತ್ತಿಗೆ ವಿ.ಪಿ. ಸಿಂಗ್ ರಾಜೀವ್ ಸರ್ಕಾರಕ್ಕೆ ರಾಜಿನಾಮೆ ಇತ್ತು ಹೊರ ಬಂದರು. ಇದಕ್ಕಿಂತ ಮೊದಲು ವಿ.ಪಿ. ಸಿಂಗ್‌ರವರ ಮೇಲೆ ಪಾರ್ಲಿಮೆಂಟನಲ್ಲೇ ಕಾಂಗ್ರೆ ಸದಸ್ಯರು ಮಾಡಿದ ಅಪಪ್ರಚಾರ, ಆಪಾದನೆಗಳು, ವಿ.ಪಿ.ಸಿಂಗ್ ರಾಜೀನಾಮೆ ಜನರಿಗೆ ರಾಜೀವ್ ಬಗ್ಗೆ ಇದ್ದ "ಮಿಸ್ಟರ್ ಕ್ಲೀನ್" ಭ್ರಮೆ ಕರಗಲು ಆರಂಭಿಸಿತು. ಉಚ್ಚ ವಲಯಗಳಲ್ಲಿ ಭ್ರಷ್ಟಾಚಾರ, ಕೈಗಾರಿಕೋದ್ಯಮಗಳ ಆರ್ಥಿಕ ಅಪರಾಧಗಳ ವಿರುದ್ಧ ಕಟು ಕಾರ್ಯಾಚರಣೆ ಬಗ್ಗೆ ರಾಜೀವ್‌ಗೆ ಆಸಕ್ತಿ ಇಲ್ಲ ಎಂಬ ಭಾವನೆ ಬಲವಾಯಿತು. ವಿ.ಪಿ.ಸಿಂಗರಿಗೆ ಕಾಂಗ್ರೆ ಪಕ್ಷದ ಒಳಗೆ, ದೇಶದ ಜನತೆಗೆ ಇದ್ದ ಸಮರ್ಥನೆಯನ್ನು ಕಡಿಮೆ ಮಾಡಲು ರಾಜೀವ್ ಸರ್ಕಾರ ಎಲ್ಲಾ ಸಾಧ್ಯವಿದ್ದ ಕ್ರಮಗಳನ್ನು ಕೈಗೊಂಡಿತು.

ಬೋಫೋರ್ಸ್

ಇಷ್ಟೇ ಸಾಲದೆಂಬಂತೆ ಸ್ವೀಡಿಷ್ ರೇಡಿಯೋ ಈಗ ಕುಪ್ರಸಿದ್ಧವಾಗಿರುವ 'ಬೋಫೋರ್ಸ್ ಗನ್' ಕೊಳ್ಳುವ ವ್ಯವಹಾರದಲ್ಲಿ ಉಚ್ಚವಲಯಗಳಲ್ಲಿ ಭಾರೀ ಲಂಚ ಹಂಚಲಾಗಿದೆ ಎಂದು ವರದಿ ಮಾಡಿತು. ಇದನ್ನು ರಾಜೀವ್ ಸರ್ಕಾರ ವಿದೇಶಿ ಬುಡಮೇಲು ಮಾಡುವ ಶಕ್ತಿಗಳ ಆಪಾದನೆ, ಸುಳ್ಳು ಬುರುಡೆ ಎಂದು ಬದಿಗೆ ತಳ್ಳಲು ಪ್ರಯತ್ನಿಸಿದರೂ ಬೋಫೋರ್ಸ್ ಭೂತಾಕಾರವಾಗಿ ಬೆಳೆಯಿತು. ಬೋಫೋರ್ಸ್ ಭೂತ ರಾಜೀವ ಸರ್ಕಾರವನ್ನು ಕಾಡುತ್ತಿದ್ದಂತೆ, ಸ್ವೀಡಿಷ್ ರಾಷ್ಟ್ರೀಯ ಆಡಿಟ್ ಬ್ಯೂರೋ ಲಂಚ ಕೊಡಲಾಗಿದೆ ಎಂದು ತನಿಖೆಯ ನಂತರ ತೀರ್ಮಾನಕ್ಕೆ ಬಂದಿತು. ಆಡಿಟ್ ಬ್ಯೂರೋ ವರದಿ ನಂತರ ದಿವಂಗತ ಸ್ವಿಡಿಷ್ ಪ್ರಧಾನಿ ಯಾವುದೇ ಏಜಂಟರುಗಳಿಲ್ಲ ಎಂದು ತನಗೆ ಆಶ್ವಾಸನೆ ನೀಡಿದ್ದರು ಎಂಬ ರಾಜೀವ್ ಹೇಳಿಕೆಯ ಬಗ್ಗೆ ಜನರಿಗೆ ನಂಬಿಕೆ ಪೂರ್ಣವಾಗಿ ಹಾರಿಹೋಯಿತು.

ವಿರೋಧ ಪಕ್ಷಗಳ ಮತ್ತು ಸಾರ್ವಜನಿಕ ಅಭಿಪ್ರಾಯಗಳ ಸತತ ಒತ್ತಾಯದಿಂದ ಕೊನೆಗೂ ತನಿಖೆಗೆ ಪಾರ್ಲಿಮೆಂಟರಿ ಸಮಿತಿ ನೇಮಿಸಲು ಸರ್ಕಾರ ಒಪ್ಪಿತು. ಆದರೆ ಈ ಸಮಿತಿಯಲ್ಲಿ ವಿರೋಧ ಪಕ್ಷಗಳಿಗೆ ಸಮಾನ ಪ್ರಾತಿನಿಧ್ಯ ನೀಡದಿದ್ದರಿಂದ, ಸಮಿತಿಯ ಅಧ್ಯಕ್ಷ ಆಳುವ ಪಕ್ಷದಿಂದ ನೇಮಿತವಾಗಿರುವ ಕಾರಣ ಮತ್ತು ಸಮಿತಿಯ ಅಧ್ಯಕ್ಷರಿಗಿದ್ದ ವಿಪರೀತ ಅಧಿಕಾರಗಳ ವಿರುದ್ಧ ಪ್ರತಿಭಟಿಸಿ ವಿರೋಧ ಪಕ್ಷಗಳು ಇದಕ್ಕೆ ಬಹಿಷ್ಕಾರ ಹಾಕಿದವು.

ಬೋಫೋರ್ಸ್ ಹಗರಣ ಮುಂದುವರಿದಂತೆ ರಾಜೀವಗಾಂಧಿ ಇದರಲ್ಲಿ ಸ್ವತಃ ಭಾಗಿಯಾಗಿದ್ದಾರೆ ಅಥವಾ ಭಾಗಿಯಾಗಿರುವ ಆಪ್ತಮಿತ್ರರನ್ನ ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಆಪಾದನೆಗಳು ಬಲವಾಗುತ್ತಾ ನಡೆದವು. ಈ ಸಂದರ್ಭದಲ್ಲಿ ಅಮಿತಾಭ ಬಚ್ಚನ್, ಮತ್ತು ಅವರ ತಮ್ಮ ಈ ಹಗರಣಕ್ಕೆ ಸಂಬಂಧಿಸಿರುವುದಾಗಿ ಸುದ್ದಿ ಹಬ್ಬಿತು. ರಾಜೀವಗಾಂಧಿ ಪಾರ್ಲಿಮೆಂಟನಲ್ಲಿ ತಾನು ಅಥವಾ ತನ್ನ ಯಾವುದೇ ಕುಟುಂಬದ ಸದಸ್ಯರು ಲಂಚ ಸ್ವೀಕರಿಸಿಲ್ಲ ಎಂದುಹೇಳಿಕೆ ನೀಡಬೇಕಾಯಿತು. ಇಂತಹ ಪರಿಸ್ಥಿತಿಗೆ ಯಾವುದೇ ಹಿಂದಿನ ಪ್ರಧಾನ ಮಂತ್ರಿ ಈಡಾಗಿರಲಿಲ್ಲ.

ಪ್ರಧಾನಿ-ರಾಷ್ಟ್ರಪತಿ ವಿರಸ

ಪ್ರಧಾನಿ-ರಾಷ್ಟ್ರಪತಿ ವಿರಸ, ಅಂಚೆ ಸೆನ್ಸಾರ್ ಕಾನೂನನ್ನು ರಾಷ್ಟ್ರಪತಿ ಸಹಿ ಮಾಡದೆ ಹಿಂದಿರುಗಿಸಿದಂದಿನಿಂದ ಸಾರ್ವಜನಿಕವಾಗಿ ತಿಳಿದು ಬಂದಿದ್ದು. ಪ್ರಧಾನಿ ರಾಷ್ಟ್ರಪತಿಗೆ ಸಂವಿಧಾನಾತ್ಮಕವಾಗಿ ತಿಳಿಸಬೇಕಾದ ಕರ್ತವ್ಯಗಳನ್ನು ರಾಜೀವ್ ಹಲವಾರು ಸಂದರ್ಭಗಳಲ್ಲಿ ಉದ್ದೇಶ ಪೂರ್ವಕವಾಗಿ ಅಲಕ್ಷಿಸಿದ್ದು ರಾಷ್ಟ್ರಪತಿ ಜೈಲ್‌ಸಿಂಗ್ ಮಾತ್ರವಲ್ಲ ಜನತೆಯಲ್ಲೂ ಕಿರಿ ಕಿರಿ ಉಂಟು ಮಾಡಿತು. ಸಂವಿಧಾನಾತ್ಮಕ ವಿಧಿಗಳನ್ನು ಮುರಿಯುವ ರಾಜೀವ್ ಧೋರಣೆ ಮುಂದುವರಿದಂತೆ ವಿರಸ ಹೆಚ್ಚಾಯಿತು. ಇದು ಕೊನೆಗೂ ರಾಷ್ಟ್ರಪತಿ ಪ್ರಧಾನಿಗೆ ಪತ್ರ ಮುಖೇನ ತನ್ನ ಪ್ರತಿಭಟನೆ ಸಲ್ಲಿಸುವರೆಗೆ ಹೋಯಿತು. ಈ ಪತ್ರ ಬಹಿರಂಗವಾಗಿ ಒಂದು ರೀತಿಯ ಸಂವಿಧಾನಾತ್ಮಕ ಬಿಕ್ಕಟ್ಟು ಸೃಷ್ಟಿಸಿತು. ಈ ಬಿಕ್ಕಟ್ಟಿನ ವಿಷಯದಲ್ಲಿ ವಿರೋಧ ಪಕ್ಷಗಳಲ್ಲಿ ಎರಡು ಧೋರಣೆಗಳು ಸ್ಪಷ್ಟವಾಗಿ ಕಂಡು ಬಂದವು. ಎಡ ಪಕ್ಷಗಳು ಸರ್ಕಾರದ ಸಂವಿಧಾನಾತ್ಮಕ ಕರ್ತವ್ಯಗಳ ಬಗ್ಗೆ ಗಮನ ಸೆಳೆದರೆ ಬಿ. ಜೆ. ಪಿ. ಮುಂತಾದ ಕೆಲವು ವಿರೋಧ ಪಕ್ಷಗಳು ಇದೇ ವಿರಸವನ್ನು ಪಯೋಗಿಸಿ ರಾಷ್ಟ್ರಪತಿ ಕಾಂಗ್ರೆ ಸರ್ಕಾರವನ್ನು ವಜಾ ಮಾಡಬೇಕೆಂದು ಪ್ರಯತ್ನಿಸಿದವು. ಇದೇ ಎರಡು ಧೋರಣೆಗಳು ಮುಂದೆ ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷದ ಅಭ್ಯರ್ಥಿ ಯಾರಾಗಿರಬೇಕು

(6 ನೇ ಪುಟ ನೋಡಿ)

ಮುಖ್ಯ ಘಟನೆಗಳು

ವಿ.ಪಿ.ಸಿಂಗ್ ಆರ್ಥಿಕ ಇಲಾಖೆಯಿಂದ ರಕ್ಷಣಾ ಇಲಾಖೆಗೆ ವರ್ಗ	ಜನವರಿ
ಪಾಕಿಸ್ತಾನ ಗಡಿಯಲ್ಲಿ ಕ್ಷೋಭೆ	ಜನವರಿ
ಮಿಜೋರಾಂನಲ್ಲಿ ಲಾಲ್‌ಡೆಂಗಾ ಮಂತ್ರಿ ಮಂಡಲ	ಫೆಬ್ರುವರಿ 20
ಎ.ಎಸ್.ಎಲ್.ವಿ. ಉಪಗ್ರಹ ಯಾನ ವಿಫಲ	ಫೆಬ್ರುವರಿ 24
ಖಲಿಸ್ತಾನಿ ಭಯೋತ್ಪಾದಕರಿಂದ ಲೂಧಿಯಾನ ಬ್ಯಾಂಕ್‌ನಿಂದ- 5.7 ಕೋಟಿ ಲೂಟಿ	-ಫೆಬ್ರುವರಿ 12
ಪ್ರಧಾನ ಮಂತ್ರಿ-ಅಧ್ಯಕ್ಷ ವಿರಸ ಪ್ರಾರಂಭ	ಮಾರ್ಚ್
ಕೇರಳ, ಪಶ್ಚಿಮ ಬಂಗಾಳಗಳಲ್ಲಿ ಎಡ-ಪ್ರಜಾಸತ್ತಾತ್ಮಕ ರಂಗ ಮತ್ತು ಎಡರಂಗಗಳ ಜಯಭೇರಿ	-ಮಾರ್ಚ್ 24-25
ಜಮ್ಮು-ಕಾಶ್ಮೀರದಲ್ಲಿ ನ್ಯಾಶನಲ್ ಕಾನ್ಫರೆನ್ಸ್-ಕಾಂಗ್ರೆ ಮೈತ್ರಿ ಕೂಟಕ್ಕೆ ಜಯ	-ಮಾರ್ಚ್ 25-26
ಫೇರ್ ಫಾಕ್ಸ್ ಹಗರಣ ವಿಚಾರಣೆಗೆ ಠಕ್ಕರ್-ನಟರಾಜನ್ ಆಯೋಗ	-ಏಪ್ರಿಲ್ 6
ವಿ.ಪಿ.ಸಿಂಗ್ ರಾಜೀನಾಮೆ	-ಏಪ್ರಿಲ್ 9
ಬೋಫೋರ್ಸ್ ಹಗರಣ ಬಯಲು	-ಏಪ್ರಿಲ್-ಮೇ
ಅಹಮದಾಬಾದ್, ಬರೋಡಗಳಲ್ಲಿ ವ್ಯಾಪಕ -ಕೋಮು ಗಲಭೆ	-ಏಪ್ರಿಲ್
ಮೀರತ್‌ನಲ್ಲಿ ವ್ಯಾಪಕ ಕೋಮು ಗಲಭೆ	-ಮೇ
ಪಂಜಾಬ್‌ನಲ್ಲಿ ಬರ್ನಾಲ ಸರ್ಕಾರವಜಾ, ಅಧ್ಯಕ್ಷರ ಆಡಳಿತ	ಮೇ 11
ಜಾಫ್ನಾಕ್ಕೆ ವಿಮಾನಗಳ ಮೂಲಕ ಪರಿಹಾರ ಸಾಮಗ್ರಿ ಪೂರೈಕೆ	-ಜೂನ್ 4
ಹರ್‍ಯಾಣದಲ್ಲಿ ಕಾಂಗ್ರೆಗೆ ಪರಾಭವ, ಲೋಕದಳ-ಬಿ.ಜೆ.ಪಿ. ಮೈತ್ರಿ ಕೂಟಕ್ಕೆ ಭಾರಿ ಜಯ	-ಜೂನ್ 18-20
ಪಂಜಾಬ್‌ನ ಲಲ್ರು ಎಂಬಲ್ಲಿ 38 ಜನ ಬಸ್ ಪ್ರಯಾಣಿಕರ ಕೊಲೆ ಖಲಿಸ್ತಾನಿ ಭಯೋತ್ಪಾದಕರಿಂದ	-ಜುಲೈ 6
ಅರುಣ್ ನೆಹ್ರೂ, ಆರಿಫ್ ಮೊಹಮ್ಮದ್‌ಖಾನ್ ಕಾಂಗ್ರೆನಿಂದ ಉಚ್ಚಾಟನೆ	ಜುಲೈ 15
ಅಧ್ಯಕ್ಷೀಯ ಚುನಾವಣೆಯಲ್ಲಿ ವೆಂಕಟರಾಮನ್ ಜಯ	ಜುಲೈ 16
ಸೋವಿಯೆತ್ ಒಕ್ಕೂಟದಲ್ಲಿ ಭಾರತ ಉತ್ಸವ ಆರಂಭ	ಜುಲೈ
ಭಾರತ-ಶ್ರೀಲಂಕಾ ಒಪ್ಪಂದಕ್ಕೆ ಸಹಿ	ಜುಲೈ 29
ಉಪಾಧ್ಯಕ್ಷರಾಗಿ ಡಾ॥ ಶಂಕರ್ ದಯಾಲ್ ಶರ್ಮಾ ಆಯ್ಕೆ	ಆಗಸ್ಟ 21
40ನೇ ಸ್ವಾತಂತ್ರ್ಯೋತ್ಸವ	ಆಗಸ್ಟ 15,
ರಾಜಸ್ತಾನದಲ್ಲಿ ರೂಪ್‌ಕನ್ವರ್‌ಳ ಸತಿ	ಸೆಪ್ಟೆಂಬರ್ 4
ವಿ.ಪಿ.ಸಿಂಗ್ ಕಾಂಗ್ರೆನಿಂದ ಉಚ್ಚಾಟನೆ	-ಸೆಪ್ಟೆಂಬರ್
ವಿ.ಪಿ.ಸಿಂಗ್‌ರಿಂದ ಜನ ಮೋರ್ಚಾ ಆರಂಭ	-ಅಕ್ಟೋಬರ್ 2
ನಾಗಾಲ್ಯಾಂಡ್‌ನಲ್ಲಿ ಕಾಂಗ್ರೆ ವಿಜಯ	ನವಂಬರ್ 20
ಭಾರತದಲ್ಲಿ ಸೋವಿಯೆತ್ ಉತ್ಸವ ಆರಂಭ	ನವಂಬರ್ 21
ಭೋಪಾಲ್ ಅನಿಲ ದುರಂತದಲ್ಲಿ ನೊಂದಜನರಿಗೆ 350ಕೋಟಿ ರೂ ತಾತ್ಕಾಲಿಕ ಪರಿಹಾರ ನೀಡಲು ಕೋರ್ಟಿನ ಆದೇಶ	-ಡಿ.17
ಪಿ.ರಾಮಮೂರ್ತಿ ನಿಧನ	-ಡಿ. 15
ಎಂ.ಜಿ.ರಾಮಚಂದ್ರನ್ ನಿಧನ	-ಡಿ.24

ಯುದ್ಧ ಭೀತಿಯಿಲ್ಲದ ಜಗತ್ತಿನ ಆಸೆಯು ಚಿಗುರೊಡೆದ ವರ್ಷ

1986 ರನ್ನು ಮೊತ್ತ ಮೊದಲ ಬಾರಿಗೆ ಅಂತರಾಷ್ಟ್ರೀಯ ಶಾಂತಿಗಾಗಿಮೀಸಲಿಡಲಾಗಿತ್ತು. ಆ ವರ್ಷದಲ್ಲಿ ಒಂದಾದ ಮೇಲೊಂದರಂತೆ ಸೋವಿಯತ್ ಪ್ರಸ್ತಾಪಗಳು ವಿಶ್ವಾದ್ಯಂತ ಶಾಂತಿ ಆಂದೋಲನಗಳಲ್ಲಿ ತುಂಬಿದ ಹೊಸ ಶಕ್ತಿಯ ಪರಿಣಾಮವಾಗಿಕೊನೆಗೂ ನಿಶ್ಶಸ್ತ್ರೀಕರಣದಮೊತ್ತಮೊದಲ ಹೂವು ಅರಳಿಸಿದ ವರ್ಷವೆಂದು 1987 ಇತಿಹಾಸದ ಪುಟಗಳನ್ನು ಸೇರಿದೆ.

ಈ ವರ್ಷವೂ ಫೆಬ್ರವರಿಯಲ್ಲಿ ಮಾಸ್ಕೋದಲ್ಲಿ ವಿಜ್ಞಾನಿಗಳು, ಕಲಾವಿದರು ಹಾಗೂ ಇತರ ಗಣ್ಯವ್ಯಕ್ತಿಗಳು ಭಾಗವಹಿಸಿದ ವಿಚಾರ ಸಂಕಿರಣ, ಮಾರ್ಚ್‌ನಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತರಾಷ್ಟ್ರೀಯ ಯುವ ಶಾಂತಿ ಸಮ್ಮೇಳನ ಜೂನ್‌ನಲ್ಲಿ ಜಪಾನೀ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನಡೆದ ಅಂತರಾಷ್ಟ್ರೀಯ ಸಭೆ, ವಿಶ್ವಾದ್ಯಂತ ನಡೆದ ಬೃಹತ್ ಶಾಂತಿ ಪ್ರದರ್ಶನಗಳು, ಸ್ಪೇನ್, ಗ್ರೀಸ್, ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿ ಅಮೆರಿಕನ್ ನೆಲೆಗಳಿಗೆ ತೀವ್ರ ವಿರೋಧ, ಇವೆಲ್ಲವುಗಳ ಒತ್ತಡಗಳಿಂದಾಗಿ ಕಳೆದ ಜುಲೈನಲ್ಲಿ ಜಿನೀವಾ ಮಾತುಕತೆಯಲ್ಲಿ ಸೋವಿಯೆತ್ ಒಕ್ಕೂಟ ಮುಂದಿಟ್ಟ ಪ್ರಸ್ತಾಪಗಳನ್ನು ಕೊನೆಗೂ ರೇಗನ್ ಒಪ್ಪಬೇಕಾಯಿತು. ಇದರ ಫಲ ಡಿಸೆಂಬರ್ 8 ರಂದು ಸಹಿ ಹಾಕಲ್ಪಟ್ಟ ಮಧ್ಯಮ ಶ್ರೇಣಿ ಹಾಗೂ ಸಮೀಪಗಾಮೀ ಪರಮಾಣು ಪ್ರಕ್ಷೇಪಾಸ್ತ್ರಗಳನ್ನು ನಿರ್ಮೂಲ ಮಾಡುವ ಚಾರಿತ್ರಿಕ ಐ.ಎನ್.ಎಫ್. ಸಂಧಿ.

ಆರ್ಥಿಕ, ಸಾಮಾಜಿಕ ರಂಗಗಳಲ್ಲಿ ಗಣನೀಯ ಸಾಧನೆಯೇನೂ ಇಲ್ಲದಿದ್ದರೂ ಆಸ್ಟ್ರೇಲಿಯಾ ಮತ್ತು ನ್ಯೂಝಿಲೆಂಡ್‌ನಲ್ಲಿ ಲೇಬರ್ ಪಕ್ಷಗಳು ಮತ್ತೆ ಅಧಿಕಾರಕ್ಕೆ ಬಂದದ್ದು (ಆಸ್ಟ್ರೇಲಿಯಾದಲ್ಲಿ ಸತತ ಮೂರನೇಬಾರಿಗೆ) ಮುಖ್ಯವಾಗಿ ಅಲ್ಲಿನ ಜನಗಳಲ್ಲಿನ ತೀವ್ರ ಪರಮಾಣು ಯುದ್ಧ ವಿರೋಧಿ ಭಾವನೆಗಳಿಂದಾಗಿಯೇ.

ಆದರೂ ಶಾಂತಿ ಪರ ಶಕ್ತಿಗಳು ತಮ್ಮ ಆಂದೋಲನವನ್ನೀಗ ದ್ವಿಗುಣ ಶಕ್ತಿಯಿಂದ ಮುಂದುವರೆಸ ಬೇಕಾಗಿದೆ. ಯಾಕೆಂದರೆ ರೇಗನ್ ತನ್ನ "ತಾರಾ ಸಮರ" ಕೈಬಿಡಲು ಇನ್ನೂ ಸಿದ್ಧರಿಲ್ಲ. ಇದೇ ಆಗಸ್ಟ್‌ನಲ್ಲಿ ಅಮೆರಿಕಾ ಮತ್ತು ಜಪಾನ್ ಸರ್ಕಾರಗಳ ನಡುವೆ ನಡೆದ ಒಪ್ಪಂದದ ಪ್ರಕಾರ ಜಪಾನ್ "ತಾರಾ ಸಮರ"ದಲ್ಲಿ ಪಾಲುಗೊಳ್ಳುವ ಐದನೇ ದೇಶವಾಗುತ್ತದೆ. ಅಲ್ಲದೆ ತನ್ನ ಮಿಲಿಟರಿಶಾಹಿಯಿಂದ ದ್ವಿತೀಯ ಮಹಾಯುದ್ಧದ ಕಾರಣಗಳಲ್ಲೊಂದಾದ ಜಪಾನ್ ಈಗ ಮತ್ತೆ ಅದೇ ದಾರಿ ಹಿಡಿಯುವಂತೆ ಕಾಣುತ್ತಿದೆ. ಇತ್ತೀಚೆಗೆ ನಡೆದ ಜಪಾನ್ ಕಮ್ಯೂನಿಸ್ಟ್ ಪಕ್ಷದ 18ನೇ ಮಹಾಧಿವೇಶನ ಇದರ ವಿರುದ್ಧ ಜನರನ್ನು ಅಣಿನೆರೆಸಲು ತೀರ್ಮಾನಿಸಿದೆ.

ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾದ ಕರಿಯರ ಹೋರಾಟ ಈಗಲೂ ಮುಂದುವರೆಯುತ್ತಿದೆ. ಇದು ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನ 75 ನೇ ವಾರ್ಷಿಕೋತ್ಸವದ ವರ್ಷ. ಕರಿಯ ಕಾರ್ಮಿಕ ವರ್ಗ ವಿಮೋಚನಾ ಹೋರಾಟದಲ್ಲಿ ಒಂದು ಪ್ರಬಲ ಶಕ್ತಿಯಾಗಿ ಮೂಡಿಬಂದಿರುವ ವರ್ಷ. ಅಲಿಪ್ತ ಆಂದೋಲನದ ಬೆಂಬಲಮೊತ್ತಮೊದಲ ಬಾರಿಗೆ ಈ ವರ್ಷದ ಆರಂಭದಲ್ಲಿ ಮಾತಿನಿಂದ ಕೃತಿಗಿಳಿಯಿತು. "ಆಫ್ರಿಕಾ ನಿಧಿ" ಆರಂಭವಾಯಿತು. ವಿಶ್ವದ ಇತರೆಡೆಯೂ ಜನತೆಯ ಬೆಂಬಲ. ಆದರೂ ವರ್ಣದ್ವೇಷಿ ಸರ್ಕಾರ ಅಮೆರಿಕಾ, ಬ್ರಿಟನ್ ಮತ್ತು ಇತರ ಪಾಶ್ಚಿಮಾತ್ಯ ದೇಶಗಳ ಬೆಂಬಲದ ಬಲದಲ್ಲಿ ಗಡಿ ದೇಶಗಳ ವಿರುದ್ಧ ಅಮಾನುಷ ಹಲ್ಲೆ ನಡೆಸಿ ಅಥವಾ ಆ ದೇಶಗಳ ಪ್ರತಿಗಾಮಿಗಳಿಗೆ ಶಸ್ತ್ರಾಸ್ತ್ರ ನೆರವು ನೀಡಿ ಅಲ್ಲಿಯ ಅನಾಯಕ ಜನರ ಕೊಲೆ ಮಾಡಿ ತನ್ನ ನೀಚ ಆಶಯವನ್ನು ಇನ್ನೂ ಮುಂದುವರೆಸಲುಶಕ್ತವಾಗಿದೆ.

ಫಿಜಿಯಲ್ಲಿ 19 ವರ್ಷಗಳ ನಂತರ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ, ತಮ್ಮ ಕೈ ಗೊಂಬೆಯಾಗಲು ನಿರಾಕರಿಸಿದ ಬಾವದ್ರಾ ಸರ್ಕಾರದ ಪದಚ್ಯುತಿ ಸಾಮ್ರಾಜ್ಯಶಾಹಿಗಳಿಗೆ ಈ ಬಾರಿ ದೊರೆತ ಇನ್ನೊಂದು ಪ್ರಮುಖ ಯಶಸ್ಸು. ತನ್ನ ಅನೀತಿಯುತ 40 ವರ್ಷಗಳನ್ನು ಈ ವರ್ಷ ಪೂರೈಸಿದ ಸಿ.ಐ.ಎ. ಇದರಅಧ್ವರ್ಯು ಎಂಬುದು ಈಗ ಸ್ಪಷ್ಟವಾಗಿದೆ. ಫಿಲಿಪೈನ್ಸ್‌ನಲ್ಲಿ ತನ್ನ ಮಾಜೀ ಕೈಗೊಂಬೆಯನ್ನು ಮತ್ತೆ ಅಧಿಕಾರಕ್ಕೆ ತರಲು ಕೂಡಾ ಸಿ.ಐ.ಎ. ವಿಫಲ ಪ್ರಯತ್ನ ನಡೆಸಿತು. ಬಲ ಪಂಥೀಯ ಮಿಲಿಟರಿ ಮುಖಂಡರಿಗೆ ದಂಗೆನಡೆಸಲು ಪ್ರಚೋದಿಸಿತು. ಸಾಧ್ಯವಾಗದಾದಾಗ ಜನಾಭಿಪ್ರಾಯ ಸಂಗ್ರಹಣೆಯ ಮೂಲಕ ತನ್ನ ಆಡಳಿತವನ್ನು ದೃಢಗೊಳಿಸಿದ ಅಕ್ವಿನೋ ಎಡ ಶಕ್ತಿಗಳೊಂದಿಗೆ ನಡೆಸುತ್ತಿದ್ದ ಮಾತುಕತೆ ಸಫಲಗೊಳ್ಳದಂತೆ ಅವನ್ನು ಬುಡಮೇಲು ಮಾಡುವಲ್ಲಿ ಸ್ವಲ್ಪ ಮಟ್ಟಿನ ಯಶಸ್ಸು ಪಡೆಯಿತು. ಇದಕ್ಕೆ ಒಂದು ಉದಾಹರಣೆ ಮುಷ್ಕರ ಪ್ರದರ್ಶನ ನಡೆಸುತ್ತಿದ್ದ ರೈತರ ಮೇಲೆ ಸೈನಿಕ ತುಕಡಿಗಳ ವಿನಾಕಾರಣ ಗೋಳಿಬಾರು.

ಈ ವರ್ಷ ಸಾಮ್ರಾಜ್ಯಶಾಹಿಗಳ ಇನ್ನೊಂದು ಕೈಗೊಂಬೆ ದಕ್ಷಿಣಕೊರಿಯಾದಲ್ಲೂ ಸರ್ವಾಧಿಕಾರದ ವಿರುದ್ಧ, ಸಾಮ್ರಾಜ್ಯಶಾಹಿಗಳ ವಿರುದ್ಧ ತೀವ್ರವಾದಹೋರಾಟ ನಡೆಯಿತು. ಅತ್ಯಂತ ದುರ್ಭರ ಪರಿಸ್ಥಿತಿಯಲ್ಲಿ ಅತ್ಯಂತ ಹೆಚ್ಚು ಉತ್ಪಾದಿಸುವ ಈ "ಮಾದರಿ" ದೇಶದ ಕಾರ್ಮಿಕ ವರ್ಗವೂ ಈ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇದರ ಪರಿಣಾಮವಾಗಿ 16 ವರ್ಷಗಳ ನಂತರ ಮೊತ್ತಮೊದಲ "ಮುಕ್ತ" ಚುನಾವಣೆ ನಡೆದರೂ ಕಳೆದ ವರ್ಷ ಫಿಲಿಪೈನ್ಸ್‌ನಂತೆ ಅಧಿಕಾರದಲ್ಲಿದ್ದವರು ಭಾರೀ ಮೋಸ ನಡೆಸಿದ್ದಾರೆಂಬ ಅಪಾದನೆ ಕೇಳಿಬರುತ್ತಿದೆ. ಮತ್ತೆ ವಿದ್ಯಾರ್ಥಿಗಳು ಬೀದಿಗಿಳಿದ್ದಾರೆ.

ಆದರೂ ಡಿಸೆಂಬರ್ 8ರ ಚಾರಿತ್ರಿಕ ಐ.ಎನ್.ಎಫ್. ಸಂಧಿಯ ಹಿನ್ನೆಲೆಯಲ್ಲಿ, ಯುರೋಪಿನಲ್ಲಿ ಶಾಂತಿ ನೆಲೆಸುವ ಸಾಧ್ಯತೆಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಹೊಸ ಚೇತನ ದೊರೆತಂತೆ ಕಂಡುಬರುತ್ತಿದೆ. ಇದಕ್ಕೆ ಒಂದು ಉದಾಹರಣೆ–ಸಹರಾವಿ ಜನತೆಯ ಹೋರಾಟ ಮೊರಾಕ್ಕೋದ ಪ್ರತಿಗಾಮಿ ರಾಜಪ್ರಭುತ್ವ ಮೊತ್ತಮೊದಲ ಬಾರಿಗೆ ಸಂಧಾನದ ಮಾತನಾಡಲಾರಂಭಿಸಿದೆ.

ಆರ್ಥಿಕ ರಂಗದಲ್ಲೂ ಪಾಶ್ಚಿಮಾತ್ಯ ಬಂಡವಾಳಶಾಹಿಗಳು ತಮ್ಮ ಅಭಿಪ್ರಾಯವನ್ನು ಹೇರುವುದು ಈಗ ಮೊದಲಿನಷ್ಟು ಸುಲಭವಾಗಿಲ್ಲ. ಈ ವರ್ಷ ಅಂಕ್ಟಾಡ್-7ರ ಸಮ್ಮೇಳನದ ಕಲಾಪಗಳಿಂದ ಇದು ಕಂಡುಬಂತು. ಆದರೂ ಇನ್ನೂ ತೃತೀಯ ಜಗತ್ತಿನ ದೇಶಗಳಲ್ಲಿ ಅವನ್ನು ಪೂರ್ತಿಯಾಗಿ ಹಿಮ್ಮೆಟ್ಟಿಸುವಷ್ಟು ಐಕ್ಯತೆ ಬಂದಿಲ್ಲ.

ಈ ವರ್ಷದ ಅಕ್ಟೋಬರ್‌ನಲ್ಲಿ ಬಂಡವಾಳಶಾಹಿ ಮಾರುಕಟ್ಟೆಗಳಲ್ಲಿ ಕವಿದ ಮಂಕು ಬಂಡವಾಳಶಾಹಿಗಳ ಎರಡೂ ಪ್ರಮುಖ ಆರ್ಥಿಕ ಸಿದ್ಧಾಂತಗಳನ್ನು ಮಣ್ಣುಮುಕ್ಕಿಸಿತು. ಮುಂದೇನುಕಾದಿದೆಯೋಎಂಬ ಭಯ ಬಂಡವಾಳಶಾಹೀ ಜಗತ್ತಿನ ಎಲ್ಲೆಡೆ ವ್ಯಾಪಿಸಿದೆ.

ತದ್ವಿರುದ್ಧವಾಗಿ ಸಮಾಜವಾದೀ ಜಗತ್ತು ಇದೇ ಸಮಯದಲ್ಲಿ ವ್ಯಾಪಕ ಸುಧಾರಣೆ, ಮರು ಸಂಘಟನೆಗಳ ಮೂಲಕ ಆರ್ಥಿಕ ರಂಗದಲ್ಲಿ ದಾಪುಗಾಲಿಡಲಾರಂಭಿಸಿದೆ. [ನೋಡಿ 'ಐಕ್ಯರಂಗ' ಡಿ.27] ಕಂಪೂಚಿಯಾ, ಅಫಘಾನಿಸ್ತಾನಗಳಲ್ಲಿನ ಕ್ರಾಂತಿಗಳೂ ಬೇರೂರಿ ರಾಷ್ಟ್ರೀಯ ಹೊಂದಾಣಿಕೆಯಮೂಲಕ ಶಾಂತಿಯುತ ಅಭಿವೃದ್ಧಿಯತ್ತ ಸಾಗುತ್ತಿವೆ.

ಮಧ್ಯ ಅಮೇರಿಕಾದಲ್ಲೂ ರೇಗನ್ ಆಶಯಕ್ಕೆ ವಿರುದ್ಧವಾಗಿ ಶಾಂತಿ ನೆಲೆಸುವ ಪ್ರಯತ್ನ ಆರಂಭವಾಗಿದೆ. ಕೋಸ್ಟಾರಿಕಾದ ಅಧ್ಯಕ್ಷರಿಗೆ ಇದು ನೋಬೆಲ್‌ಪ್ರಶಸ್ತಿ ತಂದಿತ್ತಿದೆ. ನಿಕಾರಗುವಾದ ಸ್ಯಾಂಡಿನಿಸ್ಟಾ ಆಡಳಿತ ರಾಷ್ಟ್ರೀಯ ಹೊಂದಾಣಿಕೆಯತ್ತ ಭರದಿಂದ,

(6 ನೇ ಪುಟ ನೋಡಿ)

1987ರ ಹಿನ್ನೋಟ

ಜ-8—ವಿಶ್ವಾದ್ಯಂತ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನ 75 ನೇ ವಾರ್ಷಿಕೋತ್ಸವ ಆಚರಣೆ.

ಜ-15—ಅಫಘಾನಿಸ್ತಾನ ಕ್ರಾಂತಿಕಾರಿ ಮಂಡಳಿಯ ರಾಷ್ಟ್ರೀಯ ಹೊಂದಾಣಿಕೆಯ ಘೋಷಣೆ— ಏಕಪಕ್ಷೀಯ ಕದನ ವಿರಾಮ.

ಜ-16—ಬೂರ್ಜ್ವಾ ಉದಾರೀಕರಣದ ವಿರುದ್ಧ ಹೋರಾಡಲು ಚೀನಾ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕರೆ—ಪ್ರಧಾನಕಾರ್ಯದರ್ಶಿ ಹುವಾ ಯಾವೋ ಬಾಂಗ್ ರಾಜೀನಾಮೆ ಸ್ವೀಕೃತ.

ಜ-22—ಫಿಲಿಪ್ಪೈನೋ ರೈತ ಸಂಘದ ಮತ ಪ್ರದರ್ಶಕರ ಮೇಲೆ ಬಲಪಂಥೀಯ ಸೇನಾ ತುಕಡಿಗಳ ಗೋಳಿಬಾರ್—17 ರೈತರ ಕೊಲೆ.

ಜ-23—ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪ್ಲೀನರಿ ಸಭೆ-ಸ್ವತಂತ್ರ ದೇಶದಲ್ಲಿ ಮುಕ್ತ ಚಿಂತನೆಗಾಗಿ ಪುನರ್ಸಂಘಟನೆಯ ನಿರ್ಣಯ.

ಜ-25—"ಆಫ್ರಿಕಾ ನಿಧಿ" ನವದೆಹಲಿಯಲ್ಲಿ ವಿದ್ಯುಕ್ತವಾಗಿ ಆರಂಭ

ಫೆ-2—ಫಿಲಿಪೈನ್‌ನಲ್ಲಿ ಜನಾಭಿಪ್ರಾಯ ಸಂಗ್ರಹ-ಅಕ್ವಿನೋ ಆಡಳಿತದ ದೃಢೀಕರಣ

ಮಾ-5—ಇರಾನ್—ಕಾಂಟ್ರಾ ಹಗರಣದಲ್ಲಿ ರೇಗನ್ ಪಾತ್ರ ಬಯಲು.

ಏ-7-11—ಬಾಂಗ್ಲಾ ದೇಶ್ ಕಮ್ಯೂನಿಸ್ಟ್ ಪಕ್ಷದ 4 ನೇ ಮಹಾಧಿವೇಶನ-ಸಾಮ್ರಾಜ್ಯಶಾಹೀ ಹೂರಿಕೆಯ ವಿರುದ್ಧ ಹೋರಾಡಲು ನಿರ್ಣಯ.

ಏ-20-26—ಪ್ಯಾಲೆಸ್ಟೈನ್ ರಾಷ್ಟ್ರೀಯ ಮಂಡಳಿಯ ಚಾರಿತ್ರಿಕ ಅಧಿವೇಶನ-ಐಕ್ಯತೆಯ ಮರುಸ್ಥಾಪನೆ

ಏ-26—"ಪರಮಾಣು ಮುಕ್ತ ಬ್ರಿಟನ್" ಗಾಗಿ 1 ಲಕ್ಷ ಜನರ ಮತ ಪ್ರದರ್ಶನ. ಅಮೇರಿಕಾದಲ್ಲಿನಿಕಾರಾಗುವಾ ವಿರೋಧಿ ಮತ್ತು ವರ್ಣದ್ವೇಷಿ-ಪರ ರೇಗನ್ ಆಡಳಿತದ ವಿರುದ್ಧ 1.5 ಲಕ್ಷ ಜನರ ಮತ ಪ್ರದರ್ಶನ.

ಮೇ-14—ಫಿಜಿಯಲ್ಲಿ ಬಾವದ್ರಾ ಸರ್ಕಾರದ ಪದಚ್ಯುತಿ ಸಿ. ಐ. ಎ. ಕೈವಾಡ

ಮೇ-17—ದಕ್ಷಿಣಕೊರಿಯಾದಲ್ಲಿ ಸರ್ವಾಧಿಕಾರದ ವಿರುದ್ಧ ಬೃಹತ್ ಮತ ಪ್ರದರ್ಶನಗಳ ಹೊಸ ಸರಣಿ ಆರಂಭ.

ಜೂ-11—ಬ್ರಿಟನ್ನಿನಲ್ಲಿ ಸಾರ್ವತ್ರಿಕ ಚುನಾವಣೆ-ಥ್ಯಾಚರ್ ಗೆಲುವು

ಜೂ-25-29—ಸಿ. ಪಿ. ಎಸ್. ಯು. ಕೇಂದ್ರ ಸಮಿತಿಯ ಇನ್ನೊಂದು ಮಹತ್ವ ಪೂರ್ಣ ಪ್ಲೀನರಿ ಸಭೆ.

ಜು-7-9—ಮಂಗೋಲಿಯಾದ ಉಲನ್ ಬತೊರ್‌ನಲ್ಲಿ 21 ಏಷ್ಯನ್ ಹಾಗೂ ಶಾಂತಿಸಾಗರ ಪ್ರದೇಶಗಳ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಸಲಹಾ ಸಭೆ- ಈ ಪ್ರದೇಶವನ್ನು ಶಾಂತಿ ವಲಯವನ್ನಾಗಿ ಮಾಡಲು ಕರೆ.

ಜು-29—ಶ್ರೀಲಂಕಾ ಒಪ್ಪಂದ

ಆ-7—ಮಧ್ಯ ಅಮೇರಿಕಾದ 5 ದೇಶಗಳಿಂದ ಶಾಂತಿ ಒಪ್ಪಂದಕ್ಕೆ ಸಹಿ.

ಆ-10-30—ದಕ್ಷಿಣ ಆಫ್ರಿಕಾ 3-4 ಲಕ್ಷ ಕರಿಯ ಗಣಿ ಕಾರ್ಮಿಕರ ಮುಷ್ಕರ

ಆ-15-17—ದಕ್ಷಿಣ ಕೊರಿಯಾದಲ್ಲಿ ಕಾರ್ಮಿಕರ ವ್ಯಾಪಕ ಮುಷ್ಕರ, ಮತ ಪ್ರದರ್ಶನ.

ಆ-28—ಫಿಲಿಪೈನ್ಸ್‌ನಲ್ಲಿ ವಿಫಲ ಮಿಲಿಟರಿದಂಗೆ-ಎ.ಐ.ಸಿ ನೆರವು

ಆ-19—ಜಾಗತಿಕ ಶೇರು ಮಾರುಕಟ್ಟೆ ಕುಸಿತ-'ಕರಾಳ ಸೋಮವಾರ'

ಅ-25-31—ಚೀನಾ ಕಮ್ಯೂನಿಸ್ಟ್ ಪಕ್ಷದ 13 ನೇ ಮಹಾಧಿವೇಶನ

ಅ-31—ದ್ವಿತೀಯ ಮಹಾಯುದ್ಧ ನಂತರ ಅತಿ ದೀರ್ಘಕಾಲ ಅಧಿಕಾರದಲ್ಲಿದ್ದ ನಕಾ ಸೊನೆಯ ಸ್ಥಾನದಲ್ಲಿ ತಾಕೆಶಿಟಾ ಹೊಸ ಪ್ರಧಾನಿ.

ನ-2—ಅಂಗೋಲಾದ ಮೇಲೆ ದಕ್ಷಿಣ ಆಫ್ರಿಕಾದ ಆಕ್ರಮಣ—161 ಸಾವು.

ನ-7—ಅಕ್ಟೋಬರ್ ಕ್ರಾಂತಿಯ 70 ನೇ ವಾರ್ಷಿಕೋತ್ಸವ

ನ-10—ಬಾಂಗ್ಲಾದೇಶದಲ್ಲಿ ಮಿಲಿಟರಿ ಆಡಳಿತದ ವಿರುದ್ಧ ವಿರೋಧ ಪಕ್ಷಗಳ "ಢಾಕಾ ಮುತ್ತಿಗೆ"

ನ-27—ಬಾಂಗ್ಲಾ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿಕೆ

ನ-25-29—ಬಂಡವಾಳಶಾಹೀ ಜಗತ್ತಿನ ಎರಡನೇ ದೊಡ್ಡ ಕಮ್ಯೂನಿಸ್ಟ್ ಪಕ್ಷವಾದ ಜಪಾನೀ ಕಮ್ಯೂನಿಸ್ಟ್ ಪಕ್ಷದ 18 ನೇ ಮಹಾಧಿವೇಶನ.

ಡಿ-8 —ಚಾರಿತ್ರಿಕ ಐ. ಎನ್. ಎಫ್. ಸಂಧಿಗೆ ಗೋರ್ಬಚೆವ್, ರೇಗನ್ ಸಹಿ.

ಡಿ. 16-17 ದಕ್ಷಿಣ ಕೊರಿಯಾದಲ್ಲಿ ಚುನಾವಣೆ- ಮತ್ತೆ ಗಲಭೆ ಆರಂಭ

1987-ಮಹತ್ವಪೂರ್ಣ ಚಳುವಳಿಗಳು ಆರಂಭವಾದ ವರ್ಷ

1987ರ ವರ್ಷವನ್ನು ವಿವಿಧ ರೀತಿಯಲ್ಲಿಬಣ್ಣಿಸಬಹುದು.ಅಂತರರಾಷ್ಟ್ರೀಯ ದೃಷ್ಟಿಯಿಂದ ಶಾಂತಿಯ ಸಸಿಯನ್ನು ನೆಟ್ಟ ವರ್ಷವೆನ್ನಬಹುದು. ದೇಶದ ರಾಜಕೀಯ ವಿದ್ಯಾಮಾನಗಳನ್ನು ಕಣ್ಣ ಮುಂದಿರಿಸಿಕೊಂಡು ರಾಜೀವ್ ಗಾಂಧಿಯವರ ಇಳಿಗಾಲದ ವರ್ಷವೆನ್ನಬಹುದು.ತೀವ್ರ ರಾಜಕೀಯ ಕೋಲಾಹಲಗಳ ವರ್ಷವೆನ್ನಬಹುದು.ರಾಜ್ಯಕ್ಕೆ ಸಂಬಂಧಿಸಿ ಜನತಾ ಸರ್ಕಾರದ ಅನೈಕ್ಯಮತ್ಯದ ವರ್ಷವೆನ್ನಬಹುದು. ಆದರೆ ನಮ್ಮ ದೇಶದ ಬಂಡವಾಳಶಾಹಿ ಪತ್ರಿಕೆಗಳು ವರ್ಷದ ಪ್ರಮುಖ ಘಟನೆಗಳಲ್ಲಿ ಲ್ಲೂಕಾಣದ, ಅವುಗಳ ಗಣನೆಗೇಬಾರದ ಘಟನೆಗಳ ಸರಪಳಿಹೊಂದಿದೆ.

ಭಾರತದ ಜನಸಮುದಾಯ ಇತ್ತೀಚಿನ ವರ್ಷಗಳಲ್ಲಿ ಕಾಣದ ತೀವ್ರತೆಯಿಂದ ಪ್ರತಿಭಟಿಸಿದ್ದು, ಮಹಾನ್ ಚಳುವಳಿಗಳನ್ನು ರೂಪಿಸಿದ್ದು ಮತ್ತು ಮುಂದಿನ ದಿನಗಳಲ್ಲಿ ದೇಶೋವಿಶಾಲವಾಗಿ ಬೆಳೆಯುವ ಹೋರಾಟಗಳಿಗೆ ಭದ್ರ ಅಡಿಪಾಯವನ್ನು ಹಾಕಿದ್ದು 87 ರಲ್ಲಿ ವರ್ಷದ ಆರಂಭದದಿನಗಳಲ್ಲಿಯೇ ಮೊದಲಾಗಿ ಇಡೀ ವರ್ಷದುದ್ದಕ್ಕೂ ಹಬ್ಬಿದ ಚಳುವಳಿಗಳ ವರ್ಷ ಇದು. ಭಾರತದ ಎಲ್ಲಾ ವಿಭಾಗಗಳ ದುಡಿಯುವ ಜನತೆ-ಕಾರ್ಮಿಕರು, ರೈತರು, ಮಧ್ಯಮ ವಿಭಾಗಗಳ ನೌಕರರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು, ಬೃಹತ್ ಕಾರ್ಯಕ್ರಮಗಳನ್ನು ಹೋರಾಟಗಳನ್ನು ಸಾಗಿಸಿದ ವರ್ಷ ಇದು. ತಮ್ಮ ಸ್ವಂತ ಜೀವನದ ತುರ್ತುಬೇಡಿಕೆಗಳಿಗಾಗಿ ಮಾತ್ರವಲ್ಲದೆ ಇಡೀ ದೇಶದ ಕೊಳೆತ ಬದುಕನ್ನು ಬದಲಾಯಿಸಬೇಕೆಂಬ ಹೆಬ್ಬಯಕೆಯಿಂದ ದೇಶದ ಜನ ಸಮುದಾಯ ಕಾತರಿಸಿದ ವರ್ಷ ಇದು. ಭಾರತದ ದುಡಿಯುವ ಜನಗಳಲ್ಲಿ ಅತ್ಯಂತ ಎಚ್ಚರದ, ಅತ್ಯಂತ ಸಂಘಟಿತ ಸ್ಥಾನದಲ್ಲಿರುವ ಕಾರ್ಮಿಕ ವರ್ಗ-ಅಖಿಲ ಭಾರತ ಸಾರ್ವಜನಿಕ ಉದ್ಯಮ ಕಾರ್ಮಿಕರು ಇಡೀ ದೇಶದಲ್ಲೆಲ್ಲಾ ಪ್ರತಿ ಧ್ವನಿಸುವಂತೆ ಕಾಳಗಕ್ಕೆ ಕರೆ ನೀಡಿದ ಕಹಳೆಯ ಮೊಳಗಿನಿಂದ ಆರಂಭವಾಯಿತು. ಈವರ್ಷ.ಈ ಆರಂಭಕ್ಕೆ ಸೂಕ್ತ ಕೊನೆಯೆಂಬಂತೆ, ಇಡೀ ವರ್ಷದ ಎಲ್ಲಾ ಹೋರಾಟಗಳಿಗೂ ಚಳುವಳಿಗಳಿಗೂ ಕಲಶವಿಟ್ಟಂತೆ ಡಿ.9 ರಂದು 10 ಲಕ್ಷ ಜನ ದೆಹಲಿಯ ಇತಿಹಾಸದಲ್ಲಿಯೇ ಎಂದೂ ಕಂಡರಿಯದಷ್ಟು ಜನಗಳ ಪ್ರವಾಹ "ರಾಜೀವ್ ಗಾಂಧಿಯವರೇ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಿ, ಇಲ್ಲವೆ ಭಾರತ ಬಂದ್ ಎದುರಿಸಿ" ಎಂದು ಒಕ್ಕೊರಲಿನಿಂದ ಗುಡುಗಿದ ವರ್ಷ ಇದು.

ಇದು ಚಳುವಳಿಗಳ, ಹೋರಾಟಗಳ ಸಸಿಯನ್ನು ಕಂಡ ವರ್ಷ. ಹೋರಾಟದ ಆರಂಭದ ವರ್ಷ, ಮುಂದಿನ ಬೃಹತ್ ಹೋರಾಟಗಳ ಮುನ್ಸೂಚನೆ ನೀಡಿದ ವರ್ಷ.

85 ರಲ್ಲಿ 86 ರಲ್ಲಿ ಇಡೀ ದೇಶದ ಜನತೆ ಹೋರಾಟಗಳಿಗಾಗಿ ಬೂದಿ ಮರೆಯ ಕೆಂಡದಂತೆ ಇದ್ದ ಕಾವನ್ನು ರಕ್ಷಿಸಿಕೊಂಡು ಹೆಚ್ಚಿನ ಕಾವನ್ನು ಮೈಗೂಡಿಸಿಕೊಳ್ಳುತ್ತಿದ್ದ ವರ್ಷಗಳು. ಈಗ 87 ರಲ್ಲಿ ಈ ಕಾವು ಕಿಚ್ಚಾಗಿ, ಕಿಡಿದಾವಾನಲವಾಗಿ ಹಬ್ಬುವ ಎಲ್ಲ ಸೂಚನೆಗಳನ್ನು ತೋರಿಸಿದೆ.

87ರ ವರ್ಷವಿನ್ನೇನು ಹುಟ್ಟಿತು ಎನ್ನುವಷ್ಟರಲ್ಲಿಯೇ ವಿಶ್ವಬ್ಯಾಂಕ್ ನೀಡಿದ ಸಾಲದ ಹಣದಿಂದ ಬಹುರಾಷ್ಟ್ರೀಯ ಕಂಪನಿಗಳು ಸರಬರಾಜು ಮಾಡಿದ ತಂತ್ರ ಜ್ಞಾನವೆಂಬ ಪುಷ್ಪಕ ವಿಮಾನದಲ್ಲಿ ದೇಶದ ಬಡಜನತೆಯನ್ನು ಆಳಕ್ಕೆ ತಳ್ಳಿ ತಾನೂ, ತನ್ನ ಜೊತೆಯ ಬಂಡವಾಳಶಾಹಿ ಭೂಮಾಲಕ ಆಳುವ ವರ್ಗವೂ 21ನೇ ಶತಮಾನಕ್ಕೆ ಆರಾಮವಾಗಿ ವಿಹಾರಕ್ಕೆ ಹೋಗುವ ರಾಜೀವಗಾಂಧಿಯವರ ಹಗಲುಗನಸೊಡೆದಿತ್ತು. ಜನವರಿ ಆರರಂದು ಎಲ್ಲಾ ಸಾರ್ವಜನಿಕ ಉದ್ಯಮಗಳು, ಬ್ಯಾಂಕುಗಳು, ಎಲ್.ಐ.ಸಿ. ಕಾರ್ಮಿಕರ ಎಲ್ಲಾ ಕಾರ್ಮಿಕ ಸಂಘಗಳ ಮುಷ್ಕರದ ನೋಟೀಸು ಒಂದೇ ದಿನದಲ್ಲಿ ಆಡಳಿತ ವರ್ಗಗಳನ್ನು ಮುಟ್ಟಿತ್ತು. ಸರ್ಕಾರದ ಗುಪ್ತಚರ ವಿಭಾಗಗಳ ಸಂದೇಶ ವಾಹಕಗಳು ಎಂದೂ ಇಲ್ಲದ ವೇಗದಲ್ಲಿ ಕೆಲಸ ಮಾಡುತ್ತಾ ತರುತ್ತಿದ್ದ ಮುಷ್ಕರದ ನೋಟಿಸಿನ ವಾರ್ತೆಗಳು ಅವರ ನಿದ್ದೆಗೆಡಿಸಿದ್ದವು.

ತಮ್ಮ ನಿತ್ಯದ ಸಂಬಳ ಬೋನಸ್ ಗಳಿಗಾಗಿಯಲ್ಲದ. "ದೇಶ ಹಿಡಿಯುತ್ತಿರುವ ನಾಶದ ಹಾದಿಯನ್ನು ಬದಲಿಸಿ. ಸಾರ್ವಜನಿಕ ಉದ್ಯಮವನ್ನು ಕಡೆಗಣಿಸುವುದನ್ನು ವಿಷವುಣಿಸುವುದನ್ನು ಕೈಬಿಡಿ" ಎಂದು ಉದ್ಘೋಷಿಸಿದ ಹೋರಾಟ ಅದು. 25 ಲಕ್ಷ ಕಾರ್ಮಿಕರು ಭಾಷೆ ಧರ್ಮ ಬೇಧ ಮರೆತು ಒಕ್ಕೊರಲಿನಿಂದ ನೀಡಿದ ಎಚ್ಚರಿಕೆ ಅದು. ಎಲ್ಲಾ ಬ್ಯಾಂಕುಗಳು ಎಲ್.ಐ.ಸಿ. ಕಛೇರಿಗಳು ಅಂದು ಖಾಲಿ,ಖಾಲಿ, ದೇಶವನ್ನೆ ನಡೆಸುವ ಯಂತ್ರಗಳು, ಉಕ್ಕು, ಸಿಮೆಂಟ್, ಯಂತ್ರಗಳನ್ನೇ ಉತ್ಪಾದಿಸುವ ಯಂತ್ರಗಳು ಅಂದು ನಿಶ್ಯಬ್ದ.ಅಲ್ಲಿಂದ ದೇಶದ ಆಳುವ ವರ್ಗಕ್ಕೆ, ವಿಶ್ವಬ್ಯಾಂಕ್‌ನ ತಾಳಕ್ಕೆ ಕುಣಿಯಲಿಚ್ಛಿಸಿದ ಸರ್ವಾಧಿಕಾರಿ ಆಳುವ ಪಕ್ಷಕ್ಕೆ ಆದುರುವಾಯು ಆರಂಭವಾಯಿತು.

ಮುಂದೆ ಮತ್ತೆ ಕಾರ್ಮಿಕ ವೇತನ, ತುಟ್ಟಿಭತ್ಯೆಗಳಿಗೆ ಸಂಬಂಧಿಸಿ ಸಾರ್ವಜನಿಕ ಉದ್ಯಮಗಳ ಬ್ಯೂರೋದ ಕಟ್ಟುನಿಟ್ಟಾದ ನಿರ್ದೇಶನಗಳಿಗೊಳ ಪಟ್ಟು ಕಾರ್ಮಿಕರಿಗೆ ವಂಚನೆಮಾಡಲು ಆಡಳಿತ ವರ್ಗಗಳು ಯತ್ನಿಸಿದಾಗ ಮತ್ತೊಮ್ಮೆ ಸಾರ್ವತ್ರಿಕ ಮುಷ್ಕರದ ಬೆದರಿಕೆಗೆ ಈ ಬಾರಿ ಸಾಂಕೇತಿಕ ಮುಷ್ಕರದಲ್ಲಿ ಅನಿರ್ದಿಷ್ಟ. ಕಾಲ ಮುಷ್ಕರದ ನೋಟಿಸಿಗೆ ಒಳಗಾಯಿತು. ಎಲ್ಲಾ ಕಡೆಯ ಯಶಸ್ವಿ ಮುಷ್ಕರಕ್ಕಾಗಿ ಸಿದ್ಧತೆಗಳು ನಡೆಯುತ್ತಿದ್ದುದನ್ನು ಕಂಡು ಬೆದರಿದ ಕೇಂದ್ರ ಸರ್ಕಾರ ಕೊನೆಗೆ ಕಾರ್ಮಿಕರ ಬೇಡಿಕೆಗೆ ಮಣಿಯ ಬೇಕಾಯಿತು. ಇದು ಸಾರ್ವಜನಿಕ ಉದ್ಯಮವಲಯದ ಕಾರ್ಮಿಕರ ಆತ್ಮ ವಿಶ್ವಾಸ, ಒಗ್ಗಟ್ಟು, ಮತ್ತಷ್ಟುಬಲಗೊಳ್ಳಲುನೆರವಾಯಿತು. ●

ಎಸ್. ಎಫ್. ಐ. ಕಛೇರಿ ಉದ್ಘಾಟನೆ

ಗುಲ್ಬರ್ಗಾ ನಗರದ ವಿವಿಧ ಶಾಲಾ-ಕಾಲೇಜುಗಳ ಕಾರ್ಯಕರ್ತರ ಸಭೆಯು ದಿನಾಂಕ : 24-12-1987 ರಂದು ಸಂಜೆ ಜರುಗಿತು. ಕಾನೂನು ಮಹಾವಿದ್ಯಾಲಯ,ವಿಶ್ವವಿದ್ಯಾಲಯ, ಇಂಜಿನೀಯರಿಂಗ್ ಕಾಲೇಜುಗಳಿಂದ ವಿದ್ಯಾರ್ಥಿ ಕಾರ್ಯಕರ್ತರು ಹಾಜರಿದ್ದರು.

ಎಸ್. ಎಫ್. ಐ ಸಂಘಟನೆಯ ಧ್ಯೇಯೋದ್ದೇಶಗಳು, ಕಾರ್ಯಕ್ರಮ ಮತ್ತು ಜನವರಿ 16 ರಿಂದ 18 ರ ವರೆಗೆ ನಗರದಲ್ಲಿ ಜರುಗಲಿರುವ ಐದನೆಯ ರಾಜ್ಯ ಸಮ್ಮೇಳನದ ಹಿನ್ನೆಲೆ, ಮಹತ್ವ ಮತ್ತು ಯಶಸ್ವಿಗೊಳಿಸಲು ವಿನಂತಿಸಿ ರಾಜ್ಯ ಸಮಿತಿ ಉಪಾಧ್ಯಕ್ಷರಾದ ಕಾ. ಎಸ್.ವೈ.ಗುರುಶಾಂತ್ ಮಾತನಾಡಿದರು. ಎಂ. ಎಸ್. ಕೆ. ನೌಕರರ ಸಂಘದ ಕಛೇರಿಯಲ್ಲಿ ನಡೆದ ಈ ಸಭೆಯಲ್ಲಿ ಜಿಲ್ಲಾ ಸಂಚಾಲಕರಾದ ಕಾಂ.ಸಿಂಗಣ್ಣ ಮೇರಟಗಿ, ಕಾಂ.ಅಂಬಾರಾವ್ ಮಾನ್ಪಡೆ ಮುಂತಾದವರು ಮಾತನಾಡಿದರು. 40 ಜನರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ನಂತರ ಎಸ್. ಎಫ್. ಐ. ಯ ನೂತನ ಕಛೇರಿಯನ್ನು ರಾಜ್ಯ ಸಮಿತಿ ಉಪಾಧ್ಯಕ್ಷ ಕಾಂ. ಎಸ್. ವೈ. ಗುರುಶಾಂತ್ ಉದ್ಘಾಟಿಸಿದರು. ಈಸಭೆಯಲ್ಲಿ ಎಂ.ಎಸ್.ಕೆ.ನೌಕರರ ಸಂಘ ಎಸ್.ಎಂ.ಆರ್.ಸಂಘ, ಮತ್ತು ಗುಲ್ಬರ್ಗಾ ವಿ.ವಿ.ಶಾಖೆ ಪ್ರತಿನಿಧಿಸಿ ಕಾಂ.ಸಿದ್ದಪ್ಪ ಮುಂತಾದವರು ಮಾತನಾಡಿದರು.

ಕರ್ನಾಟಕ ರಾಜ್ಯ ಕೃಷಿಕಾರ್ಮಿಕ ಸಂಘದ ರಶೀದಿ ಪುಸ್ತಕ ತಯಾರಾಗಿದೆ. ಆದ್ದರಿಂದ ರಾಜ್ಯದ ಕೇಂದ್ರದಿಂದ ಪುಸ್ತಕ ಪಡೆದು ಕೃಷಿಕಾರ್ಮಿಕರನ್ನು ಗುರುತಿಸಿ. ಸದಸ್ಯತ್ವ ನೊಂದಾಯಿಸಬೇಕೆಂದು ಜಿಲ್ಲಾ ರೈತ ಸಂಘಗಳಿಗೆ ವಿನಂತಿ.

ಪಿ. ಜಗನ್ನಾಥ
ಸಂಚಾಲಕ ಕರ್ನಾಟಕ ರಾಜ್ಯ
ಕೃಷಿ ಕಾರ್ಮಿಕರ ಸಂಘ

ಧಾರವಾಡ : ಬೀಡಿ ಕಾರ್ಮಿಕರ ಸಮಾವೇಶ

ಪ್ರಾವಿಡೆಂಟ್ ಫಂಡ್ ಮತ್ತು ಕೂಲಿಯಲ್ಲಾದ ಮೋಸದವಿರುದ್ಧ ಪ್ರತಿಭಟನೆ ಸಂಘಟಿಸಲು ಧಾರವಾಡ ಜಿಲ್ಲಾ ಬೀಡಿ ಕಾರ್ಮಿಕರ ಸಮಾವೇಶ ಜ. 5 ರಂದು ಹುಬ್ಬಳಿಯಲ್ಲಿ ವಿ.ಜಿ.ಕೆ. ನಾಯರ್ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಹೂರಾಬಿಯವರು ತಮ್ಮ ಸ್ವಾಗತ ಭಾಷಣದಲ್ಲಿ ಬೀಡಿಕಾರ್ಮಿಕರ ಸಮಸ್ಯೆಗಳನ್ನು ವಿವರಿಸಿದರು. ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ ಕಾರ್ಯದರ್ಶಿ ಮಹಮ್ಮದ್ ದಸ್ತಗೀರ್ ಅವರು ಸರಕಾರ, ಅಧಿಕಾರಿಗಳು ಮತ್ತು ಬೀಡಿ ಮಾಲಕರು, ಕಂಟ್ರಾಕ್ಟದಾರರು ನಡೆಸುತ್ತಿರುವ ಮೋಸವನ್ನು ವಿವರಿಸಿ 11-1-88 ರ ಕಾರ್ಯಕ್ರಮ ಯಶಸ್ವಿಗೊಳಿಸಲು ಕರೆ ನೀಡಿದರು.

ಮೈಸೂರ್ ಕಿರ್ಲೋಸ್ಕರ್ ಕೆಲಸಗಾರ ಸಂಘದ ಜಿ.ಆರ್. ಶಿರಪುರ, ಹೈವುಡ್ ಕೆಲಸಗಾರ ಸಂಘದ ಎಸ್.ಆರ್. ಪರಪ್ಪನ್ ಶುಭಾಶಯ ಕೋರಿದರು. ಎಂ. ಎಲ್. ಮುಲ್ಲಾ ವಂದನಾರ್ಪಣೆ ಸಲ್ಲಿಸಿದರು. ರಾಜ್ಯಾದ್ಯಂತ 11-1-88 ರಂದು ನಡೆಯುವ ಬೀಡಿ ಕಾರ್ಮಿಕರ ಹೋರಾಟವನ್ನು ಯಶಸ್ವಿಗೊಳಿಸುವ ನಿರ್ಣಯ ಕೈಗೊಳ್ಳಲಾಯಿತು.

ಸಾಂಸ್ಕೃತಿಕಘಟಕ ಸ್ಥಾಪನೆ

ಬೆಂಗಳೂರು ನಗರದ ದಾಸರಹಳ್ಳಿಯ ಪ್ರಶಾಂತ ನಗರದಲ್ಲಿ 25-12-87 ರಂದು ಡಿ ವೈ. ಎಫ್ ಐ. ನ ಹಿತೈಷಿಗಳು ಸಭೆ ಸೇರಿ 'ಯುವ ತಾರಾ' ಎಂಬ ಸಾಂಸ್ಕೃತಿಕ ಘಟಕವನ್ನು ಆರಂಭಿಸಿದರು.

ಬೆಂಗಳೂರು ಜಿಲ್ಲಾ ಸಮಿತಿಯ ಪತಿಯಿಂದ ಕಾಂ|| ಕೆ.. ಪಿ. ಎ. ಲಾಲ್ ರವರು ಭಾಗವಹಿಸಿದ್ದರು. ಸುಮಾರು 15 ಜನರ ಸಮಿತಿಯೊಂದನ್ನು ರಚಿಸಿ, ಕೆಳಕಂಡಂತೆ ನಾಯಕರಾಗಿ ಮಾಡಲಾಯಿತು. ಸುಮಾರು 15 ಜನರಿರುವ ಸಮಿತಿಗೆ ಅಧ್ಯಕ್ಷರಾಗಿ ಕಾ|| ಜನಾರ್ಧನ ಪಿಳ್ಳೆ, ಉಪಾಧ್ಯಾಕ್ಷರಾಗಿ ಕಾ|| ಸಣ್ಣೆ, ಕಾರ್ಯದರ್ಶಿಯಾಗಿ ಕಾ|| ಕೆ. ಪಿ. ಎ. ಲಾಲ್, ಸಹ ಕಾರ್ಯದರ್ಶಿಯಾಗಿ ಕಾ|| ಜೋಸೆಫ್,ಖಜಾಂಚಿಯಾಗಿಕಾ|| ಜೇಮ್ಸ್ ಇರುವರುಗಳು ಆಯ್ಕೆಯಾಗಿದ್ದಾರೆ.

ಮೊದಲ ಕಾರ್ಯಕ್ರಮವಾಗಿ 'ಮೀನ ಮಾಸತ್ತಿಲೆ ಸೂರ್ಯನ್' ವೀಡಿಯೋ ಚಿತ್ರ ಪ್ರದರ್ಶನವನ್ನು ಜನವರಿ 15 ರಂದು ಪ್ರದರ್ಶಿಸಲು ತೀರ್ಮಾನಿಸಿತು.

ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಮಾವೇಶ

ತುಮಕೂರು ಪುರಭವನದಲ್ಲಿ 3-1-88 ರಂದು ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಮಾವೇಶ ನಡೆಯಿತು. ಈ ಸಮಾವೇಶದ ಅಧ್ಯಕ್ಷತೆಯನ್ನು ಕಾ|| ಕೆ. ಆರ್. ನಾಯಕ್ ವಹಿಸಿದ್ದರು.

ಈ ಸಮಾವೇಶದಲ್ಲಿ ಕಾಂ|| ಪಿ. ರಾಮಮೂರ್ತಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಮತ್ತು ತುಮಕೂರು ಬೀಡಿ ಕಾರ್ಮಿಕರ ಪ್ರಧಾನ ಕಾರ್ಯದರ್ಶಿಯಾದ ಕಾಂ||ಮಹಮ್ಮದ್ ದಸ್ತಗೀರ್ ರವರು ವರದಿಯನ್ನು ಮಂಡಿಸಿದರು. ಪ್ರತಿನಿಧಿಗಳು ವರದಿ ನಂತರ ಚರ್ಚೆಯಲ್ಲಿ ಭಾಗವಹಿಸಿದರು.

ಕಾಂ|| ಜೆ. ವೀರಪ್ಪ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕಳೆದ ಎರಡು ವರ್ಷದಿದಿಂಚೆಗೆ ಬೀಡಿ ಕಾರ್ಮಿಕರು ರಾಜ್ಯ ವ್ಯಾಪಿ ನಡೆಸಿದ ಮುಷ್ಕರದ ಮಹತ್ವದ ಕುರಿತು ಹಾಗೂ ಮಾಲಿಕರು ನಡೆಸಿರುವ ದ್ರೋಹದ ಕುರಿತು ವಿವರಿಸಿದರು. ಕಾಂ|| ಯು.ಬಿ. ಲೋಕಯ್ಯ ಮಾತನಾಡುತ್ತಾ ಕರ್ನಾಟಕದಲ್ಲಿ ಬೀಡಿ ಕಾರ್ಮಿಕರು ಅನುಭವಿಸುತ್ತಿರುವ ಸಮಸ್ಯೆಗಳ ಕುರಿತು, ಕೇರಳದಲ್ಲಿ ಬೀಡಿ ಕಾರ್ಮಿಕರು ಪಡೆಯುತ್ತಿರುವ ಹೆಚ್ಚಿನ ಕೂಲಿ, ಹಾಗೂ ಬೋನಸ್ಸು ತುಟ್ಟಿ ಭತ್ಯೆ ಮತ್ತು ವಾರದ ರಜಾ ಹಣ ಮಾತ್ರವಲ್ಲ ಕಾರ್ಮಿಕರು ನಿಧನವಾದರೆ ಕಾರ್ಖಾನೆಯಿಂದ ಅವರ ಕುಟುಂಬಕ್ಕೆ ಸಿಗುತ್ತಿರುವ ಸಹಾಯ ಧನದ ಕುರಿತು ವಿವರಿಸಿದರು. 150 ಕೋಟಿ ರೂಪಾಯಿ ಪ್ರಾವಿಡೆಂಟ್ ಫಂಡ್ ಹಣವನ್ನೂ ಮಾಲೀಕರು ವಂಚಿಸುತ್ತಿರುವುದಾಗಿ ಆಪಾದಿಸಿದರು.ಕಾಂ|| ಹೆಚ್.ಪಿ ಚನ್ನಪ್ಪನವರು ಡಿ. 9 ರ ದೆಹಲಿ ರ್ಯಾಲಿಯ ಮಹತ್ವವನ್ನು ವಿವರಿಸಿ ಮುಂಬರುವ ಭಾರತ ಬಂದ್‌ನ್ನು ಯಶಸ್ವಿಗೊಳಿಸಲು ಸಗ್ನದ್ಧರಾಗಬೇಕೆಂದು ಕರೆ ನೀಡಿದರು.

ಕಾಂ|| ಕೆ.ಆರ್. ನಾಯಕ್ ಅಧ್ಯಕ್ಷ ಭಾಷಣ ಮಾಡುತ್ತಾ ಕಾರ್ಮಿಕರು ತನ್ನ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡುವಾಗಲೇ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ನಿರಂತರ ಪ್ರಯತ್ನ ನಡೆಸಬೇಕೆಂದು ತಿಳಿಸಿದರು.

ಸಾವಿರ ಬೀಡಿ ಮಜೂರಿಗೆರೂ 15-00, ತುಟ್ಟಿ ಭತ್ಯೆ ಪಾಯಿಂಟಿಗೆ 2 ಪೈಸೆ ಬದಲು 5 ಪೈಸೆ ಆಗಬೇಕೆಂದು ಹಾಲಿ ಕೊಡುತ್ತಿರುವ ಬೋನಸ್ಸು 8-33 ಬದಲು ಶೇ. 20 ಬೋನಸ್ಸು ಕೊಡಬೇಕೆಂದು, ಪ್ರಾವಿಡೆಂಟ್ ಫಂಡ್‌ನಲ್ಲಿ ಆಗಿರುವ ವಂಚನೆಯನ್ನು ಸರಿಪಡಿಸು ಜನವರಿ 11ರಂದು ಬೆಂಗಳೂರು ಪ್ರಾವಿಡೆಂಟ್ ಕಮಿಷನರ ಕಛೇರಿ ಮುಂದೆ ಧರಣಿ ನಡೆಯುವುದಾಗಿ ನಿರ್ಣಯಗಳನ್ನು ಸಮಾವೇಶ ಕೈಗೊಂಡರು. ಕೊನೆಯಲ್ಲಿ ಕಾಂ|| ಅಂಜಪ್ಪನವರು ವಂದನೆಗಳೊಂದಿಗೆ ಸಮಾವೇಶ ಮುಕ್ತಾಯವಾಯಿತು. ●

ಪ್ರಗತಿಯ ಪಂಚ ವರ್ಷ

ಸಾಧನೆ ತಂದ ಸಂತಸ

ಪ್ರಸ್ತುತ ಸರ್ಕಾರಕ್ಕೆ ಐದು ವರ್ಷ ತುಂಬಿತು. ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ಸರ್ಕಾರದ ಕ್ರಿಯಾಶೀಲ, ರಚನಾತ್ಮಕ ನೀತಿಯಿಂದ ಜನಸಾಮಾನ್ಯರ ಜೀವನದಲ್ಲಿ ಗಣನೀಯ ಪ್ರಮಾಣದ ಪರಿವರ್ತನೆ. ಅಧಿಕಾರ ವಹಿಸಿಕೊಂಡಂದಿನಿಂದಲೂ ರಾಜ್ಯದಲ್ಲಿ ಸತತವಾಗಿ ಬರ ಪರಿಸ್ಥಿತಿ. ಆದರೂ ಸರ್ಕಾರ ಜನತೆಗೆ ನೀಡಿದ್ದ ಭರವಸೆಗಳಲ್ಲಿ ಬಹುಪಾಲು ಈಡೇರಿವೆ. ಪರಿಣಾಮವಾಗಿ ಕರ್ನಾಟಕ ಎಲ್ಲಾ ವಿಧಗಳಲ್ಲೂ ರಾಷ್ಟ್ರದ ಇತರ ರಾಜ್ಯಗಳಿಗೆ ಮಾದರಿ.

ಕಡು ಬಡವರ ಜೀವನ ಸುಧಾರಣೆಗೆ ನಿರ್ದಿಷ್ಟ ಗುರಿಯ ಹತ್ತೆಂಟು ಕಾರ್ಯಕ್ರಮ. ಅಸಂಘಟಿತ ಕಾರ್ಮಿಕರ ನೆರವಿಗೆ 'ಆಶಾಕಿರಣ', ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಪಡೆಯಲು 'ಹಸಿರು ಕಾರ್ಡು', ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಅನಾಥ ವಿಧವೆಯರಿಗೆ ಮಾಸಾಶನ, ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ, ಬಡವರು ಮದುವೆ ಮಾಡಲು ತಾಳಿಭಾಗ್ಯ, ಸ್ವಚ್ಛ ದಕ್ಷ ಆಡಳಿತಕ್ಕಾಗಿ ಲೋಕಾಯುಕ್ತ, ಪರಿಶಿಷ್ಟ ರೈತರಿಗೆ 'ಗಂಗಾ ಕಲ್ಯಾಣ ಗ್ರಾಮೀಣ ಸಂಪರ್ಕ ಕಲ್ಪಿಸಲು, 'ಹಳ್ಳಿ ಹೆದ್ದಾರಿ, ಸೇತು ಬಂಧನ', ಬರ ಪರಿಸ್ಥಿತಿಯಲ್ಲಿ ದನಕರುಗಳ ರಕ್ಷಣೆಗೆ ಗೋಶಾಲೆ, ನಿತ್ಯದ ಅಗತ್ಯ ಪೂರೈಕೆಗೆ ಸಾಮಾಜಿಕ ಅರಣ್ಯ, ಹಳ್ಳಿ ಹಳ್ಳಿಗೂ 'ಕುಡಿಯುವ ನೀರು' ಮುಂತಾದ ಕಾರ್ಯಕ್ರಮಗಳ ಅನುಷ್ಠಾನ.

ಈ ವಿವಿಧ ಕಾರ್ಯಕ್ರಮಗಳನ್ವಯ 1986-87ರಲ್ಲಿ ನೆರವು ಪಡೆದವರ ವಿವರ ಇಂತಿವೆ :

ಯೋಜನೆ	ಫಲಾನುಭವಿಗಳು
ಹಸಿರು ಕಾರ್ಡು	31, 13, 000
ಕೇಸರಿ ಮತ್ತು ಕಂದು ಬಣ್ಣದ ಕಾರ್ಡ್‌ಗಳು	49, 97, 000
ಉಚಿತ ಪಠ್ಯ ಪುಸ್ತಕ, ಸಮವಸ್ತ್ರ	70, 00, 000
ವಿಧವಾ ಮಾಸಾಶನ	3, 64, 000
ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ	2, 09, 000

ರೈತ ಸಮುದಾಯಕ್ಕೆ ನೂರು ಕೋಟಿ ರೂಪಾಯಿಗಳ ಹೆಚ್ಚು ರಿಯಾಯಿತಿ, ಒಣ ಬೇಸಾಯ ಅಭಿವೃದ್ಧಿ, ಕೈಗಾರಿಕೆಗಳ ಬೆಳವಣಿಗೆಗೆ ಹೊಸ ನೀತಿ, ತೀವ್ರ ಗ್ರಾಮೀಣಾಭಿವೃದ್ಧಿಯ ಕಾರ್ಯಪ್ರಗತಿಗೆ ಯೋಜನಾ ಆಯೋಗದಿಂದ ಪ್ರಶಂಸೆ.

ಮಹಾತ್ಮ ಗಾಂಧೀಯ ನಲ್ಮೆಯ ಕನಸಾದ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದ ಶ್ರೇಯಸ್ಸು. ಹಳ್ಳಿ ಹಳ್ಳಿಗೆ ಅಧಿಕಾರದ ವಿಸ್ತರಣೆ. ಮತದಾನದ ವಯೋಮಿತಿಯಲ್ಲಿ ಇಳಿತ. ಯುವ ಶಕ್ತಿಗೆ ಹೊಸ ಚಾಲನೆ. ಮಹಿಳೆಯರು, ದಲಿತ ವರ್ಗಕ್ಕೆ ವಿಶೇಷ ಪ್ರಾತಿನಿಧ್ಯ. ಪ್ರಗತಿಪರ ಕಾರ್ಯಗಳಲ್ಲಿ ಜನತೆಯ ಸಹಭಾಗಿತ್ವದ ಸುವರ್ಣಯುಗ. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ. ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ರಾಜ್ಯದ ಸಂಪತ್ತಿನ ಸಮಾನ ವಿತರಣೆಗೆ ಸೂಕ್ತ ಅವಕಾಶ.

ಪ್ರಕೃತಿಯ ಪ್ರಕೋಪದ ನಡುವೆಯೂ ಉತ್ತಮ ಜೀವನ ನಿರ್ಮಾಣಕ್ಕಾಗಿ ನಿಷ್ಠೆಯ ನಿರಂತರ ಪ್ರಯತ್ನ :

ಹರಿ : 30.12.87

"ಕರ್ನಾಟಕ ವಾರ್ತೆ"

1987 ರಲ್ಲಿ ಆರಂಭವಾದ ಪ್ರಕ್ರಿಯೆ ತ್ವರಿತಗೊಳ್ಳಲಿದೆ

(1ನೇ ಪುಟದಿಂದ)

ಆದ್ದರಿಂದಲೇ ರಾಜೀವಗಾಂಧಿ ಸರ್ಕಾರವನ್ನೂ ಅಧಿಕಾರದಿಂದಿಳಿಸುವ ಹೋರಾಟದಲ್ಲಿ ಹೋರಾಟ ಶೀಲ ಜನ ಸಾಮಾನ್ಯರನ್ನು ಅಣಿನೆರೆಸುವ ಮತ್ತು ಅದೇ ಕಾಲಕ್ಕೆ ಜಾತಿ-ಕೋಮು ಸಂಘಟನೆಗಳನ್ನು ಮತ್ತು ಪಕ್ಷಗಳನ್ನು ದೂರ ತಳ್ಳುವ ಸ್ವತಂತ್ರ ಕೆಲಸವನ್ನು ಎಡ ಪಕ್ಷಗಳು ಮಾಡುತ್ತಿವೆ. ಇತರ ಪಕ್ಷಗಳು ಹೀಗೆ ಮಾಡುವುದಿಲ್ಲ.

ಇದರ ಮೊದಲ ಸ್ಪಷ್ಟ ಉದಾಹರಣೆ ಕಂಡು ಬಂದದ್ದು ರಾಷ್ಟ್ರಪತಿ ಸ್ಥಾನಕ್ಕೆ ಜೈಲ್‌ಸಿಂಗ್‌ರವರನ್ನ ನಿಲ್ಲಿಸುವ ಇತರ ವಿರೋಧ ಪಕ್ಷಗಳ ಪ್ರಯತ್ನವನ್ನು ಎಡ ಪಕ್ಷಗಳು ಬೆಂಬಲಿಸದೇ ಇದ್ದಾಗ ಚುನಾವಣಾ ಫಲಿತಾಂಶದ ಪರಿವೆಯಿಲ್ಲದೆ ಧೋರಣೆಗಳ ಸಮರ ನಡೆಸುವ ನಿಲುವು ಒಂದೆಡೆ ಮತ್ತು ಇನ್ನೊಂದೆಡೆ ಆಳುವ ಪಕ್ಷದೊಳಗಿನ ಗುಂಪುಗಾರಿಕೆಯ ಮೇಲೆ ಅವಲಂಬಿಸುವ ಸಮಯಸಾಧಕ ನಿಲುವು ಇವೆರಡು ಆ ಸಂದರ್ಭದಲ್ಲಿ ಪರಸ್ಪರ ಎದುರುಬದುರಾಗಿ ನಿಂತವು

ಎಲ್ಲಾ ವಿರೋಧಪಕ್ಷಗಳ ವಿಲೀನ ಅಥವಾ ಒಂದು ಒಕ್ಕೂಟದ ಕರೆಯನ್ನು ಅಥವಾ ಇದೇ ರೀತಿ ಎಲ್ಲಾ ಎಡ-ಬಲ, ಜಾತ್ಯಾತೀತ-ಕೋಮುವಾದಿ ಪಕ್ಷಗಳ ಒಕ್ಕೂಟದ ಇತರ ಸಲಹೆಗಳನ್ನು ಎಡ ಪಕ್ಷಗಳು ತಿರಸ್ಕರಿಸಿದವು. ಇದು ಒಂದು ತೀವ್ರ ಹೋರಾಟದ ಸ್ವರೂಪ ತಳೆಯಿತು. ಆ ಹೋರಾಟದಲ್ಲೇ ಎಡ ಪಕ್ಷಗಳು ಎಲ್ಲಾ ವಿಧದ ಕೋಮುವಾದ ಹಾಗೂ ಪ್ರತ್ಯೇಕತಾವಾದದ ವಿರುದ್ಧ ದೇಶವ್ಯಾಪೀ ಸ್ವತಂತ್ರ ಆಂದೋಲನ ನಡೆಸಲು ನಿರ್ಧರಿಸಿದವು. ಅಕ್ಟೋಬರ್ 12ರ ದೆಹಲಿ ಸಮ್ಮೇಳನ ಇದರ ಒಂದು ಪ್ರತೀಕ.

ಇದರ ಬೆನ್ನ ಹಿಂದೆಯೇ ಎಡ ಪಕ್ಷಗಳ ನೇತೃತ್ವದ 24 ಸಾಮೂಹಿಕ ಸಂಘಟನೆಗಳು ಭಾರತ ಜಾಥಾ ಹಾಗೂ ದೆಹಲಿ ರ್‍ಯಾಲಿ ನಡೆಸಲು ನಿರ್ಧರಿಸಿದವು. ಹೊಸದೊಂದು ರಾಜಕೀಯ ಶಕ್ತಿಯು ರಾಜೀವ ಸರ್ಕಾರಕ್ಕೆ ವಿರುದ್ಧ ಅಣಿನೆರೆಸಲ್ಪಟ್ಟ ಮತ್ತು ಕೋಮುವಾದಿ ಮತ್ತಿತರ ಪ್ರತ್ಯೇಕತಾವಾದಿಗಳನ್ನು ದೂರಗೊಳಿಸುವ ಎಡ ಪಕ್ಷಗಳು ಮತ್ತು ಅಖಿಲ ಭಾರತ ಸಾಮೂಹಿಕ ಸಂಘಟನೆಗಳ ಕೂಟದ-ಉದಯದ ಘೋಷಣೆಯಾಗಿತ್ತದು.

ಇದು ದೇಶದ ಬೂರ್ಜ್ವಾ ಮಾಧ್ಯಮಗಳನ್ನು ಗಾಬರಿಗೊಳಿಸಿತು. ಎಡ ಪಕ್ಷಗಳು ಸ್ವತಂತ್ರರಾಜಕೀಯ ನಿಲುವು ತಳೆಯಲು ಸಾಧ್ಯವಾಗುವುದಿಲ್ಲ ಆದ್ದರಿಂದ ಅವು ಕಾಂಗ್ರೆಸ್ ವಿರುದ್ಧ ಇತರ ವಿರೋಧ ಪಕ್ಷಗಳನ್ನು ಬೆಂಬಲಿಸಬೇಕಾಗುತ್ತದೆ. ಅಥವಾ ಇತರ ವಿರೋಧ ಪಕ್ಷಗಳ ವಿರುದ್ಧ ಕಾಂಗ್ರೆಸ್ಸನ್ನು ಬೆಂಬಲಿಸಬೇಕಾಗುತ್ತದೆ ಎಂಬ ಅವುಗಳ ಹಳಸಲು "ಸಿದ್ಧಾಂತ"ದ ಹೊಸ ಆವೃತ್ತಿಯೊಂದು ಹೊರಬಂತು. ಅದೇನೆಂದರೆ ಸೋವಿಯೆತ್ ಮುಖಂಡತ್ವ ಡಿಸೆಂಬರ್ 9 ರ ರ್‍ಯಾಲಿಯಿಂದ ಎಷ್ಟೊಂದು ಅಸಂತುಷ್ಟಗೊಂಡಿತೆಂದರೆ ಈ ವರ್ತನೆ ಬಗ್ಗೆ "ವಿವರಣೆ" ಪಡೆಯಲು ಸಿ.ಪಿ ಐ.(ಎಂ) ಮುಖಂಡತ್ವವನ್ನು ಮಾಸ್ಕೋಗೆ ಬರಲು "ಆಜ್ಞೆ"ಮಾಡಿತ್ತು. ಇದರಿಂದ ಸಿ.ಪಿ.ಐ.(ಎಂ) ರಾಜೀವ್ ರಾಜೀನಾಮೆಯ ಆಂದೋಲನ ಬಿಟ್ಟುಕೊಟ್ಟು ಕಾಂಗ್ರೆಸ್ ಸರ್ಕಾರವನ್ನು ಬೆಂಬಲಿಸುತ್ತದೆ !

ಈ ಅಪಪ್ರಚಾರವನ್ನು ತಕ್ಷಣ ಬಾಚಿಕೊಂಡ ಬಿ ಜೆ.ಪಿ.ಯ ಅಧ್ಯಕ್ಷ ಅದ್ವಾಣಿ, ಪ್ರಧಾನ ಕಾರ್ಯದರ್ಶಿ ಶರ್ಮಾ ಇತ್ಯಾದಿಗಳು. ಮಾಸ್ಕೋದಲ್ಲಿ ಸಿ.ಪಿ.ಎಸ್.ಯು. ಕಾರ್ಯದರ್ಶಿ ದೋಬ್ರಿನಿನ್‌ರನ್ನು ಭೇಟಿ ಮಾಡಿದ ಸಿ. ಪಿ. ಐ. (ಎಂ) ಮುಖಂಡರು ಏನು ಚರ್ಚಿಸಿದರೆಂದು ಭಾರತದ ಜನತೆಯನ್ನು ವಿಶ್ವಾಸಕ್ಕೆ ತಗೊಳ್ಳಬೇಕೆಂದು ಒತ್ತಾಯಿಸಿದರು. ಭಾರತದ ಆಂತರಿಕ ರಾಜಕೀಯವನ್ನು ಚರ್ಚಿಸಲಿಲ್ಲವೆಂದು ಹೇಳಿದಾಗ ಅವರು ನಂಬಲಿಲ್ಲ, ಹಳೆಯ ವಾದವನ್ನೇ ಪುನರುಚ್ಚರಿಸಿದರು. ಅವರಿಗೆ ಮತ್ತು ಅವರ ಅಪಪ್ರಚಾರಕ್ಕೆ ಬಲಿಬಿದ್ದಿರುವ ಇತರರಿಗೆ ನಾವೀಗ ಹೇಳಬಹುದಾಗಿರುವುದಿಷ್ಟೆ 1987ರಲ್ಲಿ ಆರಂಭವಾದ ಪ್ರಕ್ರಿಯೆ ತ್ವರಿತಗೊಳ್ಳುವುದನ್ನು ಈಗಷ್ಟೇ ಆರಂಭವಾಗಿರುವ ಹೊಸ ವರ್ಷ ಕಾಣಲಿದೆ.

ಇನ್ನು ಭಾರತದ ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಸೇರಿದಂತೆ ಇತರೆಲ್ಲಾ ಸೋದರ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಸಿ.ಪಿ.ಎಸ್.ಯು.ನ ಸಂಬಂಧ ಕುರಿತು ಸ್ಪಷ್ಟೀಕರಣದಲ್ಲಿ ಆಸಕ್ತಿಯಿರುವವರು ನವಂಬರ್ 2 ರಂದು 70 ನೇ ವಾರ್ಷಿಕೋತ್ಸವ ಸಂದರ್ಭದ ಗೊರ್ಬಚೆವ್ ವರದಿಯ ಈ ಪರಿಚ್ಛೇದವನ್ನು ಗಮನಿಸಬೇಕು.

"ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯ ಕೋಮಿನ್‌ಫೋರ್ಮ್ ಮಾತ್ರವಲ್ಲ, ಅಂತರ್‍ರಾಷ್ಟ್ರೀಯ ಸಮ್ಮೇಳನಗಳ ಬಾಧ್ಯತೆಯ ಆ ಕಾಲಸರಿದುಹೋಗಿದೆ. ಆದರೂ ವಿಶ್ವ ಕಮ್ಯುನಿಸ್ಟ್ ಆಂದೋಲನ ಜೀವಂತವಾಗಿ ಮುಂದುವರಿಯುತ್ತಿದೆ. ಸ್ವತಂತ್ರ ಇದೀಗ ಮಾರ್ಪಡಿಸಲಾಗದ ಸಂಗತಿ. ಅದನ್ನು 20ನೇ ಅಧಿವೇಶದಷ್ಟು ಹಿಂದೆಯೇ ನಾವು ಘೋಷಿಸಿದ್ದೆವು ನಿಜ. ಹಳೆಯ ಚಾಳಿ ತಕ್ಷಣ ನಿಲ್ಲಲಿಲ್ಲ. ಆದರೆ ಈಗ ಅದು ಯಾರೂ ಬದಲಿಸಲಾಗದ ವಾಸ್ತವತೆ. ಈ ಅರ್ಥದಲ್ಲಿ ಕೂಡಾ, 27 ನೇ ಅಧಿವೇಶನ ಅಂತಿಮ ತಿರುಗು ಬಿಂದು. ಪೆರೆಸ್ಟ್ರೋಯಿಕಾದ ಸಮಯದಲ್ಲಿ ಸೋದರ ಪಕ್ಷಗಳೊಂದಿಗಿನ ನಮ್ಮ ವ್ಯವಹಾರ ಇದನ್ನು ಸಿದ್ಧಗೊಳಿಸಿ ತೋರಿಸಿವೆ."

27 ನೇ ಅಧಿವೇಶನ ಅಂಗೀಕರಿಸಿದ ಕಾರ್ಯಕ್ರಮದ ಈ ಅಂಶವನ್ನೂ ಈ ಸಂದರ್ಭದಲ್ಲಿ ಗಮನಿಸಬಹುದು.

ಸಮಾಜವಾದಿಯೇತರ ಜಗತ್ತಿನಲ್ಲಿ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಒಂದು ಕ್ಲಿಷ್ಟ ಹಾಗೂ ವಿವಾದಾತ್ಮಕ ಸನ್ನಿವೇಶದಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂಬುದನ್ನು ಸಿ.ಪಿ.ಎಸ್.ಯು. ಪರಿಗಣನೆಗೆ ತಗೊಳ್ಳುತ್ತದೆ.

ಪ್ರತಿಯೊಂದು ದೇಶದಲ್ಲೂ ಕಮ್ಯುನಿಸ್ಟರು ಪರಿಸ್ಥಿತಿಯ ಸ್ವತಂತ್ರ ವಿಶ್ಲೇಷಣೆ ನಡೆಸಿ ತಕ್ಕ ತಂತ್ರಗಳನ್ನು, ತಕ್ಷಣದ ಹಾಗೂ ಅಂತಿಮ ಕಮ್ಯುನಿಸ್ಟ್ ಗುರಿಗಳ ಸಾಧನೆಗಾಗಿ ಸೂಕ್ತ ಧೋರಣೆಗಳನ್ನು ಹಾಗೂ ಹೋರಾಟದ ವಿಧಗಳನ್ನು ನಿರ್ಧರಿಸುತ್ತಾರೆ ಎಂಬ ದೃಢ ನಂಬಿಕೆ ಸಿ.ಪಿ.ಎಸ್.ಯು.ಗಿದೆ ಕಮ್ಯುನಿಸ್ಟ್ ಪಕ್ಷಗಳು ಈ ರೀತಿ ಕಲೆಹಾಕುವ ಅನುಭವ ಒಂದು ಅಮೂಲ್ಯ ಅಂತರ್‍ರಾಷ್ಟ್ರೀಯ ಆಸ್ತಿ"

ಈ ಪರಿಚ್ಛೇದಗಳು ಸೋದರ ಕಮ್ಯುನಿಸ್ಟ್, ಪಕ್ಷಗಳು ಕಮ್ಯುನಿಸ್ಟ್ ವಿರೋಧಿಗಳು ಕಲ್ಪಿಸಿಕೊಳ್ಳುವ ರೀತಿಯಲ್ಲಿ ಪರಸ್ಪರ ಭೇಟಿಯಾಗುತ್ತಿವೆ ಎಂಬುದನ್ನು ಸ್ಪಷ್ಟೀಪಡಿಸುತ್ತದೆ. ಯಾವ 'ದೊಡ್ಡ' ಪಕ್ಷವೂ 'ಸಣ್ಣ' ಪಕ್ಷಕ್ಕೆ ಆಜ್ಞೆ ನೀಡುವುದಿಲ್ಲ. ಎಲ್ಲವೂ ಸಮಾನ 'ದೊಡ್ಡ' ಅಥವಾ 'ಸಣ್ಣ' ಪಕ್ಷಗಳೆಂಬ ಭೇದಭಾವವಿಲ್ಲ. ಸಮಾನತೆಯ ಆಧಾರದ ಮೇಲೆ ಅಂತರ್‍ರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತವೆ. ಆಂತರಿಕ ಪ್ರಶ್ನೆಗಳಲ್ಲಿ ತಮ್ಮ ಸ್ವತಂತ್ರ ವಿಶ್ಲೇಷಣೆ ಹಾಗೂ ನಿರ್ಧಾರದ ಪ್ರಕಾರ ನಡೆಯುತ್ತವೆ ಹಾಗೂ ಈ ಬೆಳವಣಿಗೆಗಳ ಬಗ್ಗೆ ಸಮಸ್ಯೆಗಳ ಬಗ್ಗೆ ಪರಸ್ಪರ ಮಾಹಿತಿ ನೀಡುತ್ತವೆ. ನವಂಬರ್ 1986 ರಲ್ಲಿ ದೆಹಲಿಯಲ್ಲಿ ಗೊರ್ಬಚೆವ್ ಭೇಟಿ ಸಮಯದಲ್ಲಿ ಹಾಗೂ ಇತ್ತೀಚೆಗೆ ಮಾಸ್ಕೋದಲ್ಲಿ ಸಿ.ಪಿ.ಐ.(ಎಂ)-ಸಿ.ಪಿ.ಎಸ್.ಯು ಮಾತುಕತೆಗಳಲ್ಲಿ ನಡೆದದ್ದು ಇದೇ.

(1 ನೇ ಪುಟ ದಿಂದ)

ಕರ್ನಾಟಕದ ಪ್ಲಾಂಟೇಷನ್ ಕಾರ್ಮಿಕರಿಗೆ ಸರಿಯಾದ ವಸತಿ ಸೌಕರ್ಯವಿಲ್ಲದಿರುವುದು, ಕುಡಿಯುವ ನೀರಿನ ಸೌಲಭ್ಯ ಕೆಲವು ತೋಟಗಳಲ್ಲಿ ಇನ್ನೂ ಇಲ್ಲದಿರುವುದು, ಕಾನೂನಿನ ಪ್ರಕಾರ ಪ್ಲಾಂಟರುಗಳು ಆಸ್ಪತ್ರೆಗಳನ್ನು ಕಟ್ಟದಿರುವುದು, ವೈದ್ಯಕೀಯ ಸೌಲಭ್ಯ ದೊರೆಯದಿರುವುದು, ಮಕ್ಕಳಿಗೆ ಬಾಲ ಪಾಲಿಕೆ, ಮತ್ತು ಶಿಕ್ಷಣದ ವ್ಯವಸ್ಥೆಯಿಲ್ಲದಿರುವುದು, ವಾಚನಾಲಯ, ಕ್ರಿಡಾ ವ್ಯವಸ್ಥೆ ಮತ್ತು ಉಪಹಾರ ಗೃಹಗಳಿಲ್ಲದಿರುವುದು, ಪ್ಲಾಂಟರುಗಳು ದೊಡ್ಡ ಸಂಖ್ಯೆಯಲ್ಲಿ ಕಾಂಟ್ರಾಕ್ಟ್ ಮತ್ತು ದಿನಗೂಲಿ ಕಾರ್ಮಿಕರನ್ನು ಪಯೋಗಿಸಿ ಅವರಿಗೆ ಕಾನೂನಿನ ಸೌಲಭ್ಯಗಳನ್ನು ಕೊಡದೆ ವಂಚಿಸುತ್ತಿರುವುದನ್ನು ತಡೆಯಲು ಸರ್ಕಾರವು ಕೂಡಲೇ ಪ್ಲಾಂಟೇಶನ್ ಲೇಬರ್ ಆಕ್ಟ್ ಜಾರಿ ಮಾಡಿ ಎಲ್ಲಾ ಸೌಲಭ್ಯಗಳೂ ಎಲ್ಲಾ ಕಾರ್ಮಿಕರಿಗೂ ಸಿಕ್ಕುವಂತೆ ಮಾಡಬೇಕೆಂದೂ ಮನವಿಯಲ್ಲಿ ಕೇಳಿಕೊಳ್ಳಲಾಗಿತ್ತು.

ಮನವಿಗಳನ್ನು ಸ್ವೀಕರಿಸಿದ ಸಚಿವರು ಮನವಿಗಳ ಮೇಲೆ ತುರ್ತುಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ಕೊಟ್ಟರು.

(1ನೇ ಪುಟದಿಂದ)

ಎಸ್. ಆರ್. ಬೊಮ್ಮಾಯಿ ಅವರು ಹಣಕಾಸು ಆಯೋಗ ಕೇಂದ್ರ ಸರಕಾರದ ಪರವಾಗಿದ್ದು ಅದರಲ್ಲಿ ಬದಲಾವಣೆ ಆಗ ಬೇಕಾಗಿರುವ ಅವಶ್ಯಕತೆಗಳ ಕುರಿತು ಒಮ್ಮತಕ್ಕೆ ಬರಲಾಗಿದೆಂದೂ, ತಮ್ಮ ವರದಿಯನ್ನು ಕಾಂಗ್ರೆಯೇತರ ಮುಖ್ಯಮಂತ್ರಿಗಳ ಸಭೆಯಲ್ಲಿ ಮಂಡಿಸಿ ಮುಂದಿನ ಕಾರ್ಯಕ್ರಮ ನಿರ್ಧರಿಸಲಾಗುವುದೆಂದು ಹೇಳಿರುವುದು ಶುಭ ಚಿನ್ಹೆಯಾಗಿದೆ.

1983 ರಲ್ಲೇ ಕಾಂಗ್ರೆಯೇತರ ವಿರೋಧ ಪಕ್ಷಗಳ ಸಭೆ ಸೇರಿ ಕೇಂದ್ರ ಸರಕಾರದ ಮೇಲೆ ಒತ್ತಾಯ ತಂದ ಪರಿಣಾಮವಾಗಿ ದಿ|| ಇಂದಿರಾಗಾಂಧಿಯವರು ಕೇಂದ್ರ-ರಾಜ್ಯ ಸಂಬಂಧ ನಿರ್ಧರಿಸಿ, ಧನ ಸಹಾಯದ ಕುರಿತು ಶಿಫಾರಸು ಮಾಡಲು ಸರ್ಕಾರಿಯಾ ಕಮಿಶನನ್ನು ನೇಮಿಸಿದ್ದರು. ಅಷ್ಟೇ ಅಲ್ಲ ಅದಕ್ಕೆ ಪೂರಕವಾಗಿ ವಿರೋಧ ಪಕ್ಷಗಳೆಲ್ಲಾ ಸೇರಿ ಹದಿನಾರು ಅಂಶದ ಕಾರ್ಯಕ್ರಮದ ಆಧಾರದಲ್ಲಿ ಕೇಂದ್ರ ಸರಕಾರದ ವಿರುದ್ಧ ಬೃಹತ್ ಚಳುವಳಿಯ ಕಾರ್ಯಕ್ರಮವನ್ನೂ ರೂಪಿಸಿದ್ದವು. ಆದೆ ಕೆಲವು ಕಾಂಗ್ರೆಯೇತರ ಮುಖ್ಯ ಮಂತ್ರಿಗಳ ಅನಾಸ್ತೆಯಿಂದ ಆ ಪ್ರಯತ್ನ ಮುಂದುವರಿಯಲಿಲ್ಲ. ಈಗ ಮತ್ತೆ ಎಡ ಪಕ್ಷಗಳ ಐಕ್ಯ ಹೋರಾಟದ ಫಲವಾಗಿಯೂ, ರಾಜೀವ ಗಾಂಧಿಯವರ ಸರ್ವಾಧಿಕಾರಿ ಪ್ರವೃತ್ತಿ, ವಿರೋಧ ಪಕ್ಷಗಳ ಸರಕಾರಗಳನ್ನು ಸಂಪೂರ್ಣ ಕಡೆಗಣಿಸುವ, ಸಾಧ್ಯವಾದರೆ ಉರುಳಿಸುವ ನೀತಿ ಎಚ್ಚರಿಕೆ ನೀಡದಂತಾಗಿದೆ. ಮತ್ತೆ ಎಲ್ಲರೂ ಸೇರಿ ಐಕ್ಯ ಹೋರಾಟಕ್ಕೆ ಅಣಿಯಾಗುವಂತಾಗಿದೆ.

ಬರಗಾಲ ನೆರೆ ಹಾವಳಿಯಂಥ ಮಾನವೀಯ ಕಾರ್ಯಗಳಿಗೂ ಕೈ ಜೋಡಿಸಿ ಕೇಂದ್ರಕ್ಕೆ ಭಿಕ್ಷೆ ಬೇಡುವಂಥ ಈಗಿನ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆಯಾಗಿ, ಅದು ಕಾಂಗ್ರೆಯೇತರ ಸರಕಾರವೇ ಇರಲಿ ಕಾಂಗ್ರೆಸ್ ಸರಕಾರವೇ ಇರಲಿ ಅವರವರಿಗೆ ನಾಯಬದ್ಧವಾದ ಹಣಕಾಸಿನ ಪಾಲು ಸಿಗುವಂತಾಗಲೇಬೇಕು, ಹಣಕಾಸು ಆಯೋಗ ರಾಜ್ಯಗಳಿಗೆ ಆದಾಯದ ಸಿಂಹ ಪಾಲು ಕೊಡುವಂತೆ ಆಗಲೇಬೇಕು. ಹಾಗೆಯೇ ವಿರೋಧ ಪಕ್ಷಗಳು ಆಳುತ್ತಿರುವ ಸರಕಾರಗಳ ಕುರಿತು ಬೆಂಗಳೂರಿನಲ್ಲಿ ಸೇರುವ ಕಾಂಗ್ರೆಯೇತರ ಮುಖ್ಯ ಮಂತ್ರಿಗಳು ಸರಿಯಾದ ನಿರ್ಣಯ ಕೈಗೊಳ್ಳುತ್ತಾರೆಂದು ನಾವು ಆಶಿಸುತ್ತೇವೆ. ಕಾಂಗ್ರೆಯೇತರ ಮುಖ್ಯಮಂತ್ರಿಗಳ ಒಗ್ಗಟ್ಟು ಬಲಗೊಳ್ಳಲಿ, ಐಕ್ಯ ಹೋರಾಟ ಮುಂದುವರಿಯಲಿ. ಅವುಗಳಿಗೆಲ್ಲ ಸಿ. ಪಿ. ಐ. (ಎಂ) ಹಾಗೆಯೇ ಐಕ್ಯರಂಗ ಸಂಪೂರ್ಣ ಬೆಂಬಲ ನೀಡುತ್ತದೆ. ಕರ್ನಾಟಕದ ರಾಜಧಾನಿಗೆ ಆಗಮಿಸುತ್ತಿರುವ ಪ. ಬಂಗಾಲದ ಮುಖ್ಯ ಮಂತ್ರಿ ಜ್ಯೋತಿ ಬಸು, ಕೇರಳ ಮುಖ್ಯ ಮಂತ್ರಿ ಇ.ಕೆ. ನಯನಾರ್, ತ್ರಿಪುರ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ, ಹಾಗೆಯೇ ಆಂಧ್ರದ ಎನ್. ಟಿ. ಆರ್. ಅಸ್ಸಾಮಿನ ಮಹಾಂತೋ ಹರಿಯಾಣದ ದೇವಿಲಾಲ್ ಮೊದಲಾದವರಿಗೆಲ್ಲ ಹಾರ್ಧಿಕ ಸ್ವಾಗತ ಬಯಸುತ್ತೇವೆ.

ಈವಾರ........

ಗೋರ್ಬಚೆವ್ ಪ್ರಮಾಣಿಕತನ ರೇಗನ್‌ನಂತ ಸಿನಿಕನನ್ನು ವಿಚಲಿತನನ್ನಾಗಿ ಮಾಡುವುದರಲ್ಲಿ ಸಂದೇಹವಿಲ್ಲ ಜಿನೀವ, ರೆಕ್ಯಾವಿಕ್, ಮೊನ್ನೆ ವಾಷಿಂಗ್‌ಟನ್ ಸಭೆ, ಹೀಗೆ ಶೃಂಗ ಸಭೆಗಳಿಗೆ ಬರಲು ಸದಾ ಸಿದ್ಧರಾಗಿರುವ ಗೋರ್ಬಚೆವ್ ಕರಸಿದ್ದಾರೆ.

–ಡಾ. ಕೆ. ಎಂ. ಶ್ರೀನಿವಾಸಗೌಡ
ಲಂಕೇಶ್ ಪತ್ರಿಕೆಯಲ್ಲಿ

ರಾಜ್ಯವೊಂದರ ಆಡಳಿತದ ಸೀಮಾರೇಷೆಯನ್ನು ಉಲ್ಲಂಘಿಸಿ ಅದನ್ನು ಆಕ್ರಮಿಸುವ ಪ್ರವೃತ್ತಿಯನ್ನು ಕೇಂದ್ರ ಸರ್ಕಾರ ಮೈಗೂಡಿಸಿಕೊಂಡಿದೆ.

–ಜ್ಯೋತಿಬಸು.

ಭಾರತದಲ್ಲಿನ ಶಕ್ತಿಯ ಅಭಾವಕ್ಕೆ ಅಣುವಿದ್ಯುತ್ ಸ್ಥಾವರಗಳನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಈಗ ಆ ಸ್ಥಾವರಗಳನ್ನು ಸುಭದ್ರವಾದ ರೀತಿಯಲ್ಲಿ ನಿಮಿಸುವ ಶಕ್ತಿ ಇದೆ.

–ಡಾ|| ರಾಜಾರಾಮಣ್ಣ, ಖ್ಯಾತ ವಿಜ್ಞಾನಿ.

ಅಧಿಕಾರ ಸ್ಥಾನದಲ್ಲಿರುವವರು ರಾಜಕೀಯ ವಿರೋಧಿಗಳಿಗೆ ಕಿರುಕಳ ನೀಡಲು ನ್ಯಾಯಾಂಗದ ಕಾರ್ಯವಿಧಾನವನ್ನು ಬಳಸಿಕೊಳ್ಳುವುದು ಸಲ್ಲದ ನಡೆ.

- ಸುಪ್ರೀಂಕೋರ್ಟ್ ಮಾಜಿ ನ್ಯಾಯಾಧೀಶ ಖನ್ನಾ.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone · 75331 UMA Printers B-53 Editor : P. Ramachandra Rao Managing Editor : N. K. Upadhyay